ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 40 | ಅಕ್ಟೋಬರ್ 5, 1980 | ಬೆಲೆ : 50 ಪೈಸೆ

ರಾಯರ ಗಲಿಬಿಲಿ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರು "ಇಂದಿರಾಗಾಂಧಿಯವರ ಆಶೀರ್ವಾದ ತನಗೆ ಇದ್ದೇ ಇದೆ ಮತ್ತು ಇದಿರುವ ತನಕ ತನ್ನ ಮುಖ್ಯಮಂತ್ರಿ ಸ್ಥಾನವನ್ನು ಅಲುಗಾಡಿಸುವುದು ಯಾರಿಂದಲೂ ಸಾಧ್ಯವಿಲ್ಲ" ಎಂದು ಬಾಹ್ಯವಾಗಿ ಎಷ್ಟೇ ಘೋಷಿಸುತ್ತಲಿದ್ದರೂ, ರಾಯರೀಗ ಗಲಿಬಿಲಿಯಲ್ಲಿರುವಂತೆ ತೋರುತ್ತಿದೆ.

ಪತ್ರಿಕಾ ವರದಿಗಾರರನ್ನು ತುಚ್ಛವಾಗಿ ಬೈದು, ರಾಜ್ಯದ ನಾಲ್ಕು ಮುಖ್ಯ ಪತ್ರಿಕಾ ಕಛೇರಿಗಳಿಗೆ ಕಾಂಗ್ರೆಸ್ ಗೂಂಡಾಗಳಿಂದ ಧಾಳಿ ನಡೆಸಿದ್ದಕ್ಕೆ ರಾಜ್ಯದಾದ್ಯಂತವೂ, ರಾಷ್ಟ್ರಮಟ್ಟದಲ್ಲೂ ಎಲ್ಲಾ ವಿರೋಧ ಪಕ್ಷಗಳು ಮತ್ತು ಎಲ್ಲಾ ವಿಭಾಗದ ಜನತೆಯಿಂದ ಉಗಿಸಿಕೊಂಡದ್ದು ಮಾತ್ರವೇ ಅಲ್ಲ, ರಾಜ್ಯದ ಕಾಂಗ್ರೆಸ್ಸಿನ ವಿರೋಧಿ ಗುಂಪಿನಿಂದಲೂ ಛೀಮಾರಿ ಹಾಕಿಸಿಕೊಳ್ಳಬೇಕಾಗಿ ಬಂತು. ಈ ಅವಕಾಶವನ್ನು ಉಪಯೋಗಿಸಿಕೊಂಡು, ಗುಂಡೂರಾಯರ ಮಂತ್ರಿಮಂಡಲ ವಿಸ್ತರಣೆಯಲ್ಲಿ ಪಕ್ಷಾಂತರಿಗಳನ್ನು ಸೇರಿಸುವುದು ಬೇಡ ಮತ್ತು ಚುನಾವಣೆಯೇ ನಡೆಯಲಿ ಎಂದು ವಾದಿಸುವ ರಾಯರ ವಿರೋಧಿ ಗುಂಪು ನವದೆಹಲಿಗೆ ಮತ್ತೆ ದೂರನ್ನು ಒಯ್ದಿತು. ಇತ್ತೀಚಿನ ಬೆಳವಣಿಗೆಗಳು ವಿರೋಧಿ ಗುಂಪಿನ ವಾದಕ್ಕೆ ಹೆಚ್ಚಿಗೆ ಪುಷ್ಟೀಕರಣ ಕೊಟ್ಟು, ಇಂದಿರಾಗಾಂಧಿಯವರು ಗುಂಡೂರಾಯರಿಗೆ ಆಶೀರ್ವಾದ ಕೊಡುವಾಗ ಯೋಚಿಸುವಂತೆ ಮಾಡಿದಂತೆ ತೋರುತ್ತದೆ. ರಾಯರ ವಿರೋಧಿ ಗುಂಪು ಮೇಲುಗೈ ಪಡೆದಂತಿದೆ.

ಸಂಪಾದಕೀಯ

ಗುಂಡೂರಾಯರು ಮುಖ್ಯಮಂತ್ರಿಯಾದಂದಿನಿಂದ, ಅಂದರೆ ಅವರು ಘೋಷಿಸಿದ ಮಣ್ಣಿನ ಮಕ್ಕಳವಾದದಿಂದ ಮೊದಲ್ಗೊಂಡು, ಪತ್ರಿಕೆಗಳ ಮೇಲೆ ನಡೆಸಿದ ಆಕ್ರಮಣದ ತನಕ-ಪ್ರತಿಯೊಂದು ಹೇಳಿಕೆ ಮತ್ತು ಕ್ರಮಗಳು ಇಂದಿರಾಗಾಂಧಿಯನ್ನು ಸಂತಸಗೊಳಿಸಲಾರವು. ರಾಯರ ವರ್ತನೆ ಬಹಳಷ್ಟು ಆಕಾಂಕ್ಷೆಗಳನ್ನಿರಿಸಿ ಕಾಂಗ್ರೆಸ್ಸಿಗೆ ಹಾರಿದವರಿಗೂ ಮತ್ತು "ನಿಷ್ಠಾವಂತರೆನಿಸಿದವರಿಗೂ" ಅಂದರೆ ಇತ್ತಂಡದವರಿಗೂ ಅತೃಪ್ತಿ ತರುವಂತಿದೆ. ಕೆಲವು ತಿಂಗಳುಗಳಿಂದ ಮಂತ್ರಿಮಂಡಲ ವಿಸ್ತರಣೆಯನ್ನು ಇಂದು ಮಾಡುವೆ, ನಾಳೆ ಮಾಡುವೆ ಎಂದು ರಾಯರು ಹೇಳುತ್ತಾ ಬಂದಿರುವರು. ತಮ್ಮ ಸರದಿಗಾಗಿ ಏನೇನೋ ಆಸೆಗಳನ್ನಿಟ್ಟುಕೊಂಡು ಕಾಯುತ್ತಿದ್ದವರಿಗೆಲ್ಲಾ ಈಗ ನಿರಾಸೆಯಾಗುವಂತಿದೆ. ಪತ್ರಿಕಾ ವರದಿಗಳಂತೆ ಸಧ್ಯ ಒಂದಿಬ್ಬರು ಅಥವಾ ನಾಲ್ಕು ಮಂದಿ ನಿಷ್ಠಾವಂತರೆನಿಸಿದವರನ್ನು ಮಾತ್ರ ಮಂತ್ರಿಮಂಡಲಕ್ಕೆ ಸೇರಿಸಿದರೆ ಸಾಕೆಂದು ಮೇಲಿಂದಲೇ ಆದೇಶ ಬಂದಂತಿದೆ. ಹತ್ತು ಮಂದಿಗಳನ್ನು ಮಂತ್ರಿಮಂಡಲಕ್ಕೆ ಸಧ್ಯವೇ ಸೇರಿಸಿಕೊಳ್ಳ

[ಕಡೆಯ ಪುಟ ನೋಡಿ]

ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಪ್ರಚಂಡ ವಿಜಯ

ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು, ಸೆಪ್ಟೆಂಬರ್ 16 ರಂದು ಜರುಗಿದ ಚುನಾವಣೆಗಳಲ್ಲಿ ಆರು ಮುನಿಸಿಪಲ್ ಕೌನ್ಸಿಲ್‌ಗಳಿಗೆ ಮತ್ತು ಐವತ್ತು ಪಂಚಾಯತಿಗಳಿಗೆ ಪ್ರಚಂಡ ಬಹುಮತದಿಂದ ಆರಿಸಿ ಬಂದಿದೆ. ಸ್ಥಾಂಘಿಕ ಸಂಸ್ಥೆಗಳಿಗೆ ನಡೆದ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತದರ ಮಿತ್ರಕೂಟದ ವಿರುದ್ಧ ಪಡೆದ ಈ ಜಯ ಅತ್ಯಂತ ಗಮನಾರ್ಹವಾದುದಾಗಿದೆ.

ಆರು ಪುರಸಭೆಗಳ 132 ವಾರ್ಡುಗಳಲ್ಲಿ 70ನ್ನು ಎಡ ಮತ್ತು ಪ್ರಜಾಸತ್ತಾತ್ಮಕ ವೇದಿಕೆ ಗಳಿಸಿದೆ ವಿವರ ಈ ರೀತಿ ಇದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ-33, ಕಾಂಗ್ರೆಸ್ (ಯು)-25, ಸಿ ಪಿ ಐ -8, ಕೇರಳ ಕಾಂಗ್ರೆಸ್ (ಮಾಣಿಗುಂಪು)-3 ಮತ್ತು ಕೇರಳ ಕಾಂಗ್ರೆಸ್ (ಪಿಳ್ಳೆಗುಂಪು)-1.

ಕಾಂಗ್ರೆಸ್ ಮತ್ತದರ ಮಿತ್ರಕೂಟವು 30 ಸ್ಥಾನಗಳನ್ನು ಗಳಿಸಿದೆ. ಅದರಲ್ಲಿ ಕಾಂಗ್ರೆಸ್-20, ಕೇರಳ ಕಾಂಗ್ರೆಸ್ (ಜೋಸೆಫ್ ಗುಂಪು)-3, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್-3, ಎಸ್.ಆರ್.ಪಿ -1 ಮತ್ತು ಬಿ ಜೆ. ಪಿ -3. ಮೂವತ್ತೆರಡು ಸ್ಥಾನಗಳಲ್ಲಿ ಹೆಚ್ಚಿನವು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಬೆಂಬಲದೊಂದಿಗೆ ಸ್ವತಂತ್ರ ಅಭ್ಯರ್ಥಿಗಳ ಪಾಲಾದಿವೆ.

ಐವತ್ತು ಪಂಚಾಯತಿಗಳ ಒಟ್ಟು 493 ವಾರ್ಡುಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ರಂಗವು 238 ಸ್ಥಾನ ಗಳಿಸಿದೆ. ಅದರಲ್ಲಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು-131, ಕಾಂಗ್ರೆಸ್ (ಯು)-39, ಸಿ. ಪಿ. ಐ.-31, ಕೇರಳ ಕಾಂಗ್ರೆಸ್ (ಮಾಣಿಗುಂಪು)-20, ಕೇರಳ ಕಾಂಗ್ರೆಸ್ (ಪಿಳ್ಳೆಗುಂಪು)-2, ಆರ್.ಎಸ್.ಪಿ.-5 ಮತ್ತು ಆಲ್ ಇಂಡಿಯಾ ಮುಸ್ಲಿಂಲೀಗ್-10 ಸ್ಥಾನಗಳನ್ನು ಗಳಿಸಿವೆ. ಕಾಂಗ್ರೆಸ್-49, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್-22, ಕೇರಳ ಕಾಂಗ್ರೆಸ್ (ಜೋಸೆಫ್ ಗುಂಪು)-7 ಮತ್ತು ಬಿ ಜೆ.ಪಿ,-1 ಒಟ್ಟು 79 ಸ್ಥಾನಗಳನ್ನು ಕಾಂಗ್ರೆಸ್ ಒಕ್ಕೂಟ ಗಳಿಸಿದೆ. ಮತ್ತು 176 ಸ್ಥಾನಗಳಲ್ಲಿ ಹೆಚ್ಚಿನವು ಎಡ ಮತ್ತು ಪ್ರಜಾಸತ್ತಾತ್ಮಕ ಒಕ್ಕೂಟದ ಬೆಂಬಲದ ಸ್ವತಂತ್ರ ಅಭ್ಯರ್ಥಿಗಳ ಪಾಲಾಗಿವೆ. ಕೆಲವೇ ಸ್ವತಂತ್ರ ಅಭ್ಯರ್ಥಿಗಳು ಎಡರಂಗದ ಮತ್ತು ಬೆಂಬಲ ಪಡೆದ ಅಭ್ಯರ್ಥಿಗಳನ್ನು ಸೋಲಿಸಿದ್ದಾರೆ.

ಕಾಂಗ್ರೆಸ್ ನೇತೃತ್ವದ ವಿರೋಧಿ ಪಕ್ಷಗಳು ಪ್ರತಿಯೊಂದು ಸನ್ನಿವೇಶದಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ

[ಕಡೆಯ ಪುಟ ನೋಡಿ]

ಅಸ್ಸಾಂ ಸಮಸ್ಯೆಯಲ್ಲಿ ಅಡಕವಾಗಿರುವ ಪ್ರಶ್ನೆಗಳು

ಈ ಲೇಖನ ಬರೆಯುತ್ತಿರುವ ಕಾಲಕ್ಕೆ ಅಸ್ಸಾಂ ಚಳುವಳಿ ಕೊನೆಗೊಳ್ಳುವುದೇ ಅಥವಾ ಕೊನೆಗೊಳ್ಳುವುದಾದರೆ ಯಾವ ಶರತ್ತುಗಳ ಮೇಲೆ-ಇತ್ಯಾದಿ ವಿಷಯಗಳು ಇನ್ನೂ ಸ್ಪಷ್ಟವಾಗಿಲ್ಲ. ಈ ವರೆಗಿನ ಮಾತುಕತೆಗಳು ಸಾಗಿರುವ ಗತಿಯನ್ನು ನೋಡಿದರೆ ಸಂಬಂಧಪಟ್ಟ ಎಲ್ಲರೂ ಅಂದರೆ ಕೇಂದ್ರ ಸರಕಾರ, ಅಸ್ಸಾಂ ಚಳುವಳಿಗಾರರು, ದೇಶದ ರಾಜಕೀಯ ಪಕ್ಷಗಳು ಮತ್ತು ಅಸ್ಸಾಮಿನಲ್ಲೇ ಇರುವ ಬೇರೆ ಬೇರೆ ರಾಜಕೀಯ ಪಕ್ಷಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಮಸ್ತ ಭಾರತೀಯ ಜನತೆ ಈ ಸಮಸ್ಯೆಯಲ್ಲಿ ಅಡಕವಾಗಿರುವ ಪ್ರಶ್ನೆಗಳ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆಯೆನ್ನುವುದರಲ್ಲಿ ಸಂದೇಹವಿಲ್ಲ.

ವಿದೇಶೀಯರನ್ನು ಪತ್ತೆಹಚ್ಚಲು 1951ರ ರಾಷ್ಟ್ರೀಯ ಪೌರತ್ವದ ದಾಖಲೆ ಹಾಗೂ 1952ರ ಮತದಾರರ ಯಾದಿಯನ್ನೇ ಆಧಾರವಾಗಿಟ್ಟುಕೊಳ್ಳಬೇಕೆಂದು ಅಸ್ಸಾಂ ಚಳುವಳಿಗಾರರು ಪಟ್ಟುಹಿಡಿದಿದ್ದಾರೆನ್ನಲಾಗಿದೆ. ತಾವೂ ಜವಾಬ್ದಾರಿಯುತ ಭಾರತೀಯ ನಾಗರಿಕರೆಂದು ಹೇಳಿಕೊಳ್ಳುವ ಇವರು ವಿದೇಶೀಯರನ್ನು 'ಪತ್ತೆಹಚ್ಚುವ' ಕಾರ್ಯಕ್ಕೆ ಮೇಲಿನ ಎರಡು ದಾಖಲೆಗಳನ್ನಷ್ಟೇ ಆಧಾರವಾಗಿಟ್ಟುಕೊಳ್ಳುವುದರೊಂದಿಗೆ ಅವರನ್ನು ದೇಶದಿಂದ 'ಹೊರಗಟ್ಟುವ' ಪ್ರಶ್ನೆಯನ್ನು ನಿರ್ಧರಿಸುವಾಗ ಮಾತ್ರ 'ನೆಹರೂ-ಲಿಯಾಖತ್' ಒಪ್ಪಂದದಂತಹ ಇತರ ದಾಖಲೆಗಳನ್ನು ಪರಿಗಣಿಸಲೂ ಸಿದ್ಧರೆಂದು ಹೇಳುತ್ತಿದ್ದಾರೆ. ಈ ಎರಡನೇವರ್ಗದ ದಾಖಲೆಗಳ ವಿಷಯದಲ್ಲಿ ಅವರು 'ಕೊಡ ಕೊಳ್ಳುವ' ಧೋರಣೆ ಅನುಸರಿಸಲೂ ತಯಾರಿದ್ದಾರಂತೆ; ಆದರೆ ಮೊದಲನೆಯ ದಾಖಲೆಗಳ ವಿಷಯದಲ್ಲಿ ಮಾತ್ರ ಅವರು ಯಾವುದೇ ರಾಜಿ ಒಪ್ಪಂದಕ್ಕೆ ಬರುವ ಪ್ರಶ್ನೆಯೇ ಇಲ್ಲವಂತೆ!

ತಿರುವು ಮುರುವಾದ ಹೇಳಿಕೆಗಳು

ಈ ಹಟಮಾರಿತನದ ವರ್ತನೆಯ ಅರ್ಥವಿಷ್ಟೇ. 1952ನೇ ಇಸವಿಯ ನಂತರ ಅಸ್ಸಾಮಿಗೆ ಹೋಗಿ ಅಲ್ಲಿ ಉದ್ಯೋಗಕ್ಕೆ ಸೇರಿದ, ಭೂಮಿಯನ್ನು ಕ್ರಯಕ್ಕೆ ಪಡೆದು ಅಥವಾ ಇತರ ಜೀವನೋಪಾಯದ ಮಾರ್ಗವನ್ನು ಅವಲಂಬಿಸಿದ ಎಲ್ಲರನ್ನೂ 'ವಿದೇಶೀಯರೆಂದು' ಸಾರಬೇಕು, ಇಲ್ಲಿ, ಭಾರತದ ಬೇರೆ ರಾಜ್ಯಗಳಿಂದ ಬಂದು ಕಳೆದ 28 ವರ್ಷಗಳಿಂದ ಅಸ್ಸಾಮಿನಲ್ಲಿ ನೆಲೆಸಿರುವ ಭಾರತೀಯ ನಾಗರಿಕರು ಮತ್ತು

ಇ. ಎಂ. ಎಸ್. ನಂಬೂದಿರಿಪಾದ್

ಪೂರ್ವಪಾಕಿಸ್ತಾನ ಬಂಗ್ಲಾದೇಶದಿಂದ ವಲಸೆ ಬಂದವರು – ಇವರ ನಡುವೆ ಯಾವುದೇ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಿಲ್ಲ. ಇದು ಅಸ್ಸಾಂ ಚಳುವಳಿಗಾರರಾಗಲೀ ಅವರ ಮಿತ್ರದಳಗಳಾಗಲೀ ಭಾರತದ ಬೇರೆ ರಾಜ್ಯಗಳಿಂದ ಬಂದು ಅಸ್ಸಾಮಿನಲ್ಲಿ ನೆಲೆಸಿರುವ ಭಾರತೀಯ ಪೌರರಿಗೆ ವಿರೋಧವಾಗಿಲ್ಲವೆಂದೂ ಅವರು ವಿರೋಧಿಸುತ್ತಿರುವುದು ವಿದೇಶೀಯರನ್ನು ಮಾತ್ರವೆಂದೂ ಹಲವು ಬಾರಿ ನೀಡಲಾದಿರುವ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿದೆ. ಪೂ. ಪಾಕಿಸ್ತಾನ ಬಂಗ್ಲಾದೇಶಗಳಿಂದ ಬಂದಿದ್ದ ನಿರಾಶ್ರಿತರ ಹೆಚ್ಚಿನ ಹೊರೆಯನ್ನು ಪ. ಬಂಗಾಳ ರಾಜ್ಯವೇ ಹೊತ್ತಿದೆ. ಗಾತ್ರ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ತ್ರಿಪುರಾದಂತಹ ಅತಿ ಚಿಕ್ಕ ರಾಜ್ಯವೂ ಸ್ವೀಕರಿಸಿದ ನಿರಾಶ್ರಿತರ ಪ್ರಮಾಣ ಅಸ್ಸಾಮಿಗಿಂತ ಜಾಸ್ತಿ. ಕಳೆದ ಹಲವು ವರ್ಷಗಳಲ್ಲಿ ಬೆಳೆದು ಬಂದ ಅಸ್ಸಾಂ ಚಳುವಳಿಯ ಹಿನ್ನೆಲೆಯನ್ನು ಇದರೊಂದಿಗೆ ಗಮನಿಸಬೇಕು.

ಸುಮಾರು ಎರಡು ದಶಕಗಳ ಹಿಂದೆ ಒಮ್ಮೆ ಕಾಣಿಸಿಕೊಂಡ ಚಳುವಳಿ ಹೆಚ್ಚುಕಡಿಮೆ ಅಸ್ಸಾಮಿ ಭಾಷೆ ಮಾತಾಡುವ ಜನರು ಒಂದು ಪ್ರತ್ಯೇಕ ಭಾಷೆ ಮತ್ತು ಸಂಸ್ಕೃತಿಯನ್ನು ಹೊಂದಿರುವ ಗುಂಪಾಗಿ ಅಥವಾ ಒಂದು ರಾಷ್ಟ್ರೀಯರಾಗಿ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಹಂಬಲಿಸುತ್ತಿದ್ದುದರ ಅಭಿವ್ಯಕ್ತಿಯಾಗಿತ್ತು. ಬಹುರಾಷ್ಟ್ರೀಯತೆಯುಳ್ಳ ನಮ್ಮ ದೇಶದಲ್ಲಿ ಇತರ ಭಾಷಾ ಮತ್ತು ಸಾಂಸ್ಕೃತಿಕ ಗುಂಪುಗಳ ಅಸ್ತಿತ್ವವನ್ನು ಬ್ರಿಟಿಷರ ಆಳ್ವಿಕೆಯಲ್ಲಿ ದಶಕಗಳ ಕಾಲ ಹತ್ತಿಕ್ಕಲಾದ ರೀತಿಯಲ್ಲೇ ಅಸ್ಸಾಮಿಯರ ಪ್ರತ್ಯೇಕ ಅಸ್ತಿತ್ವವನ್ನು ಮೆಟ್ಟಹಾಕಲಾಗಿತ್ತು. ಕಾಂಗ್ರೆಸ್ ಆಡಳಿತೆಯಲ್ಲೂ ಇದು ಮುಂದುವರಿಯಿತು. ದೇಶದ ಬೇರೆ ಭಾಗಗಳಂತೆಯೇ ಅಸ್ಸಾಂ ರಾಜ್ಯವನ್ನೂ ಆರ್ಥಿಕವಾಗಿ ಮತ್ತು ಇತರ ರೀತಿಯಲ್ಲಿ ಹಿಂದುಳಿದ ರಾಜ್ಯವಾಗಿಯೇ ಉಳಿಯಗೊಡಲಾಯಿತು. ಹಾಗಾಗಿ ಬ್ರಿಟಿಷರ ಪರಂಪರೆಯನ್ನೇ ಮುಂದುವರಿಸಿಕೊಂಡು ಬಂದ ಕೇಂದ್ರ ಸರಕಾರದ ವಿರುದ್ಧ ಅಸ್ಸಾಮಿಯರಿಗೆ ಸಹಜವಾದಿಯೇ ಅತೃಪ್ತಿಯಿತ್ತು.

[ಕಡೆಯ ಪುಟ ನೋಡಿ]

ತುಂಗಭದ್ರ ಎಡದಂಡೆ ರೈತರು ಸಂಘಟನೆಯ ಹಾದಿಯಲ್ಲಿ

ತುಂಗಭದ್ರ ಎಡದಂಡೆ ಕಾಲುವೆಯು ಕೊಪ್ಪಳ, ಗಂಗಾವತಿ, ಸಿಂಧನೂರ, ಮಾನ್ವಿ, ರಾಯಚೂರ ತಾಲ್ಲೂಕುಗಳಲ್ಲಿ ಹರಿದು, 5,80,000 ಎಕರೆ ಭೂಮಿಗೆ ನೀರುಣ್ಣಿಸುತ್ತಿದೆಯೆಂದು ಸರ್ಕಾರಿ ಕಚೇರಿಗಳ ದಾಖಲಾತಿಯಿದೆ ಇದು ನೈಜತೆಗೆ ದೂರವಾದ ಮಾತು. ಸಾವಿರಾರು ಎಕರೆ ಭೂಮಿ ನೀರು ಕಾಣದೆ, ರೈತರು ಹಗಲು ಕನಸು ಕಾಣುತ್ತಿದ್ದರೆ, ಇನ್ನೂ ಸಾವಿರಾರು ಎಕರೆ ಭೂಮಿ ನೀರು ಬಸಿತು ಉಪ್ಪು ಹರಡಿ ಹಾಳಾಗುತ್ತಿದೆ. ರಾಯಚೂರ, ಹಾಗೂ ಮಾನ್ವಿ ತಾಲ್ಲೂಕು ರೈತರ ಗೋಳು ಹೇಳತೀರದು. ಕಾಲುವೆಯಲ್ಲಿ ಯಾವದೇ ವ್ಯತ್ಯಾಸ, ತೊಂದರೆಯಾದರೆ ಇವರೇ ಮೊದಲು ಕಷ್ಟಕ್ಕೀಡಾಗುತ್ತಾರೆ.

ಈ ತೊಂದರೆಯನ್ನು ತಪ್ಪಿಸಲೋಸುಗ ರಾಯಚೂರ ಮಾನ್ವಿ ತಾಲ್ಲೂಕಗಳಿಗೆ ನೇರವಾದ, ಇನ್ನೊಂದು ಕಾಲುವೆಯನ್ನು ಹಾಕಿ, ಕಬ್ಬು ಬೆಳೆಯಲು, ಸೌಕರ್ಯ ಮಾಡಬೇಕೆಂದು ಮನವಿ ಮಾಡಲಾಗಿ, ಒಂಭತ್ತು ಕೋಟಿ ರೂಪಾಯಿ ಮಂಜೂರಾದ ಹಣವನ್ನು, ಉಚ್ಚ ಇಂಜಿನಿಯರುಗಳು ಅಧಿಕಾರಿಗಳು, ಕೆಲವರು ಶಾಸಕರು ಸೇರಿ ರೈತರಿಗೆ ದೊಡ್ಡ ಮೋಸ ಮಾಡಿದರು. ಇದ್ದ ಕಾಲುವೆಯು ಬ್ಯಾಂಕನ್ನು ದೊಡ್ಡದು ಮಾಡಿ, ಹೆಚ್ಚಿಗೆ ನೀರಿನ ಸೌಕರ್ಯ ಮಾಡಿದರಾಗುತ್ತದೆಂದು ತಿಳಿಸಿ, ಒಂಭತ್ತು ಕೋಟಿಯನ್ನು ಎತ್ತಿಹಾಕಲಾಯಿತು. ಬರುವ ನೀರಿನಲ್ಲಿ ಯಾವ ಬದಲಾವಣೆಯಾಗಲಿಲ್ಲ.

ಪ್ರತಿವರ್ಷ ಜೂನ್ ತಿಂಗಳಲ್ಲಿ, ಒಂದು ತಿಂಗಳು ನೀರನ್ನು ನಿಲ್ಲಿಸಿ, ಮೇಜರ್ ರಿಪೇರಿ ಮಾಡುವ ನಾಟಕ ನಡೆಯುತ್ತಿದೆ. ಲಕ್ಷಾಂತರ ಹಣದ ಪೋಲು ಮಾಲಾಗುತ್ತಿದೆ. ಕಾಲುವೆಗೆ ನೀರು ಬಿಟ್ಟು ಕೆಲವೇ ದಿನಗಳಲ್ಲಿ ಕಾಲುವೆಯನ್ನು ಒಡೆಯಲಾಗುತ್ತಿದೆ, ತುರ್ತುರಿಪೇರಿಯೆಂದು ಲಕ್ಷಾಂತರ ಹಣ ಮಂಜೂರ ಮಾಡಿ, ರಿಪೇರಿ ಮಾಡಿಸಲಾಗುತ್ತಿದೆ. ಪ್ರತಿ ವರ್ಷ, ಬೆಳೆ ನಿಂತಾಗ ಎಷ್ಟೋ ಬಾರಿ ಒಡೆಯುತ್ತದೆ. 1979ರಲ್ಲಿ ಇಪ್ಪತ್ತೆಂಟು ಸಲ ಕಾಲುವೆ ಒಡೆದರೂ, ಸರಕಾರ ಯಾವದೇ ಗಮನ ಹರಿಸಲಿಲ್ಲ.

ಈ ರೀತಿ ಒಂದು ಕಡೆ ನೀರಿನ ಅಭಾವ, ಇನ್ನೊಂದು ಕಡೆ ಅಧಿಕಾರಿಗಳ ಲಂಚ, ಅಭಿವೃದ್ಧಿ ಕರ, ನೀರಿನ ಕರ, ಇನ್ನಿತರ ಕರಗಳು, ಬೆಳೆದ ಮಾಲಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆಯಿಲ್ಲದಿರುವುದು, ರೈತನ ಬೇಸಾಯಕ್ಕೆ ಬೇಕಾಗುವ ವಸ್ತುಗಳ ಬೆಲೆ ಗಗನಕ್ಕೇರಿರುವುದು ಇವುಗಳಿಂದಲಾಗಿ ರೈತ ಜೀವನ ನಡೆಸಲು ಸಾಧ್ಯವಿಲ್ಲದಾಗಿದೆ, ಇನ್ನು ಸಣ್ಣ ರೈತರು ಕೂಲಿಕಾರರಾಗಿ ಮಾರ್ಪಡುತ್ತಿದ್ದಾರೆ. ಕೂಲಿಕಾರರು ಪಟ್ಟಣಕ್ಕೆ ವಲಸೆ ಬರುತ್ತಿದ್ದಾರೆ.

ಪರಿಸ್ಥಿತಿ ಈ ರೀತಿಯಲ್ಲಿರುವಾಗ ಈ ವರ್ಷವು ಕೂಡ ಕಾಲುವೆ ಒಡೆಯಿತು. ರೈತರು ಮನವಿಗಳನ್ನು ಸಲ್ಲಿಸಿದರೂ, ಮನವಿಗಳು ಕಸದ ಬುಟ್ಟಿಗೆ ಬಿದ್ದವು ಈಗಾಗಲೇ ಕಾಲುವೆ ಐದು ಸಲ ಒಡೆದಿದ್ದು, ಸಿಂಧನೂರು, ರಾಯಚೂರ, ಮಾನ್ವಿ ತಾಲ್ಲೂಕಿನ ರೈತರು ದವಸಧಾನ್ಯ ವಸ್ತುಗಳನ್ನು ಮಾರಿ, ಭತ್ತ ಬಿತ್ತಿ, ಫಸಲಿಗಾಗಿ ಕಾಯುತ್ತಿದ್ದರು. ಆದರೆ ನೀರಿಲ್ಲದೆ ಬೆಳೆ ಒಣಗಿ ಹೋಯಿತು. ಬ್ಯಾಂಕಿನವರು ಸಾಲ ಕೊಡುವುದನ್ನು ನಿಲ್ಲಿಸಿದ್ದಾರೆ. ಅಧಿಕಾರಿಗಳು ತೆರಿಗೆ ವಸೂಲಿ ಮುಂದುವರಿಸಿದ್ದಾರೆ. ರೈತರು ದಾರಿ ಕಾಣದೆ ದಿಕ್ಕೆಟ್ಟು ಪ್ರತಿ ಹಳ್ಳಿಯಿಂದಲೂ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲು ತಂಡೋಪತಂಡವಾಗಿ ಬರುತ್ತಿದ್ದಾರೆ. ನರಗುಂದ ರೈತ ಬಂಡಾಯದ ನೆನಪು ಇಲ್ಲಿಯ ರೈತರ ಮನದಲ್ಲಿ ಹಸಿರಾಗಿದೆ. ಸರಕಾರವು ಕೂಡಲೇ ಗಮನಹರಿಸದಿದ್ದಲ್ಲಿ ತುಂಗಭದ್ರಾ ಎಡದಂಡೆ ರೈತರು, ಹೋರಾಟದ ಹಾದಿ ಹಿಡಿಯಬೇಕಾಗುತ್ತೆ.

ಈಗಾಗಲೇ ನಾಲ್ಕು ತಾಲೂಕುಗಳಲ್ಲಿ ರೈತ ಸಂಘಗಳನ್ನು ರಚಿಸಿದ್ದು, ಜಂಟೀ ಕ್ರಿಯಾ ಸಮಿತಿಯನ್ನು ರಚಿಸಲು ಮಾತುಕತೆ ನಡೆದಿರುತ್ತದೆ.

●

ರೈತಸಂಘದ ಕಾರ್ಯದರ್ಶಿ ಕೊಲೆಗೆ ಯತ್ನ

ದಿನಾಂಕ 19-9-80ರಂದು ಪುತ್ತೂರು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಎಚ್. ಲಕ್ಷ್ಮಣಗೌಡ ಅವರ ಕೊಲೆಗೆ ಯತ್ನ ನಡೆದು ಸ್ವಲ್ಪದರಲ್ಲಿಯೇ ಅವರು ಪಾರಾಗಿದ್ದಾರೆ. ಪುತ್ತೂರು ತಾಲ್ಲೂಕಿನ ಕೊಳ್ತಿಗೆ ಗ್ರಾಮದವರಾದ ಕಾಂ. ಲಕ್ಷ್ಮಣಗೌಡರ ನೇತೃತ್ವದಲ್ಲಿ ಕೊಳ್ತಿಗೆ ಗ್ರಾಮದಲ್ಲೂ, ತಾಲ್ಲೂಕಿನಲ್ಲೂ ಹಲವಾರು ಹೋರಾಟಗಳು ನಡೆದಿವೆ. ರೈತ ಮತ್ತು ಕಾರ್ಮಿಕ ಸಂಘಟನೆ ಬಲಿಷ್ಠವಾಗುತ್ತಿರುವುದನ್ನು ಕಂಡು ಕೆಲವು ಕಿಡಿಗೇಡಿಗಳು ಈ ಪ್ರಯತ್ನ ನಡೆಸಿದ್ದಾರೆ.

ಪುತ್ತೂರು ತಾಲ್ಲೂಕು ರೈತಸಂಘ ಈ ಹೇಯ ಕೃತ್ಯವನ್ನು ಉಗ್ರವಾಗಿ ಖಂಡಿಸಿ ಪಾತಕಿಗಳನ್ನು ಬೇಗ ಪತ್ತೆ ಹಚ್ಚುವಂತೆ ಸರಕಾರವನ್ನು ಒತ್ತಾಯಿಸುತ್ತದೆ.

●

ಬೆಂಗಳೂರು ದ. ತಾ. ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘಕ್ಕೆ ಕಾಂಗ್ರೆ ಅಭ್ಯರ್ಥಿಗಳ ವಿರುದ್ಧ ವಿರೋಧಪಕ್ಷಗಳ ಒಕ್ಕೂಟದ ಗೆಲವು

ದಿನಾಂಕ 28-9-80ರಂದು ನಡೆದ ಮೇಲ್ಕಂಡ ಸಹಕಾರ ಸಂಘದ ಡೈರೆಕ್ಟರುಗಳ ಚುನಾವಣೆಯಲ್ಲಿ ಕಾಂಗ್ರೆ ಅಭ್ಯರ್ಥಿಗಳ ವಿರುದ್ಧ ವಿರೋಧ ಪಕ್ಷಗಳ ಒಕ್ಕೂಟದ ಅಭ್ಯರ್ಥಿಗಳಾದ ಕಾಂ. ಪಿ ಜಗನ್ನಾಥ, ಕಾಂ. ಅಶ್ವತ್ಥ ನಾರಾಯಣರೆಡ್ಡಿ, ಶ್ರೀ ಪಿ ವಿ, ಕೃಷ್ಣಪ್ಪ, ಎಂ. ನಾರಾಯಣ, ಕೆ. ಎನ್. ಪಿಲ್ಲಣ್ಣ ಮತ್ತು ಶ್ರೀ ಆರ್. ವೆಂಕಟೇಶಪ್ಪ ಇವರುಗಳು ಅತ್ಯಧಿಕ ಬಹುಮತದಿಂದ ಆಯ್ಕೆಯಾಗಿದ್ದಾರೆ.

ಹಣ, ಹೆಂಡಗಳ ಪ್ರಲೋಭನೆ ಒಡ್ಡಿ, ಕಳ್ಳಓಟುಗಳಿಂದ ಪರಿಸ್ಥಿತಿಯನ್ನು ಹದಗೆಡಿಸಲು ಪ್ರಯತ್ನಿಸಿದ್ದ ಕಾಂಗ್ರೆ ಅಭ್ಯರ್ಥಿಗಳನ್ನು ಸೋಲಿಸಿ. ಜನತೆ ಇಂದಿರಾ ಸರಕಾರದ "ಸುಭದ್ರ" ಹಾಗೂ "ಕ್ರಿಯಾತ್ಮಕ" ಘೋಷಣೆಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು ಗಮನಾರ್ಹವಾಗಿದೆ. ಚುನಾವಣೆ ದಿನ ಸಾವಿರಾರು ರೂ. ಖರ್ಚುಮಾಡಿ ಪೆಂಡಾಲ್ ಹಾಕಿ ಇಂದಿರಾಗಾಂಧಿ ಫೋಟೋಗೆ ಪೂಜೆ ಏರ್ಪಡಿಸಿ ಮತದಾರರನ್ನು ಆಕರ್ಷಿಸಲು ಯತ್ನಿಸಿದ ಕಾಂಗ್ರೆ ಅಭ್ಯರ್ಥಿಗಳ ಅಭಿಲಾಷೆಯನ್ನು ಜನತೆ ಧಿಕ್ಕರಿಸಿದ್ದಾರೆ.

ಚುನಾವಣೆಯಲ್ಲಿ ಹೋರಾಟಗಾರ ಪ್ರಾಮಾಣಿಕ ಅಭ್ಯರ್ಥಿಗಳನ್ನು ಚುನಾಯಿಸಿದ ಆ ಭಾಗದ ಮತದಾರರನ್ನು ದಕ್ಷಿಣ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣ್ಣ ಅಭಿನಂದಿಸಿದ್ದಾರೆ.

○

ಅಗ್ರಿಕಲ್ಚರ್ ಕಾಲೇಜಿನ ಕೃಷಿಕೂಲಿಕಾರರ ಹೋರಾಟ

ಧಾರವಾಡದ ಕೃಷಿ ಕಾಲೇಜಿನ ವಿವಿಧ ಸಂಶೋಧನೆ ಶೈಕ್ಷಣಿಕ ಕೇಂದ್ರಗಳಲ್ಲಿ ನೂರಾರು ಕೃಷಿ ಕಾರ್ಮಿಕರು ಅನೇಕ ವರ್ಷಗಳಿಂದ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ದೇಶದ ಯಾವದೇ ಭಾಗದಲ್ಲಿರುವಂತೆ ಇಲ್ಲಿಯೂ ಹೆಚ್ಚಿನ ಕೃಷಿ ಕಾರ್ಮಿಕರು ಭೂರಹಿತರಾಗಿದ್ದು ಅತ್ಯಂತ ಶೋಷಣೆಗೆ ಒಳಗಾಗಿ ಕಷ್ಟ ಕಾರ್ಪಣ್ಯಕ್ಕೆ ಒಳಗಾಗಿದ್ದಾರೆ. ಇಲ್ಲಿ ದುಡಿಯುವ ಹೆಚ್ಚಿನ ಕೃಷಿಕಾರ್ಮಿಕರು ಕಾಲೇಜಿನ ಸುತ್ತಮುತ್ತಲಿನ ಹಳ್ಳಿಯವರಾಗಿದ್ದು, ಕಾಲೇಜಿನ ಸಂಶೋಧನ ಕೇಂದ್ರಕ್ಕಾಗಿ ತಮ್ಮ ಭೂಮಿಯನ್ನು ಕಳೆದುಕೊಂಡಿರುತ್ತಾರೆ. ಅಲ್ಲದೇ ಆ ಕಳೆದುಕೊಂಡ ಭೂಮಿಗೆ ತಕ್ಕ ಪರಿಹಾರ ಧನ ಇಲ್ಲಿವರೆಗೂ ದೊರೆತಿರುವುದಿಲ್ಲ. ಪ್ರಾಣಿಗಳಿಗಿಂತ ಕಡೆಗಣಿಸಲ್ಪಟ್ಟಿರುವ ಈ ಕೃಷಿ ಕಾರ್ಮಿಕರ ದುಡಿಮೆಯಿಂದಲೇ ವಿದ್ಯಾರ್ಥಿಗಳ ಶಿಕ್ಷಣ, ಸಂಶೋಧಕರ ಸಂಶೋಧನಾ ಕಾರ್ಯ, ಕಾಲೇಜಿನ ಆಡಳಿತ ಇತ್ಯಾದಿ ನಡೆಯುತ್ತದೆ.

ಕಳೆದ ವರ್ಷ ಕೃಷಿಕಾರ್ಮಿಕರು ಸಂಘಟಿತರಾಗಿ ಹೋರಾಟವನ್ನು ಪ್ರಾರಂಭಿಸಿದರು. ಸಂಘಟನೆಯನ್ನು ನಾಶಪಡಿಸಲು ಕಾಲೇಜಿನ ಆಡಳಿತ ವರ್ಗ ನಾನಾ ಕುತಂತ್ರಗಳನ್ನು ಮಾಡಿದರೂ ಸಫಲರಾಗಲಿಲ್ಲ. ಕಾರ್ಮಿಕ ಸಂಘವನ್ನು ಮನ್ನಿಸುವದು, ವೇತನದಲ್ಲಿ ಹೆಚ್ಚಳ ಸಹಿತ ಖಾಯಂಗೊಳಿಸುವದು, ವಾರದ ರಜೆ, ಬಡ್ತಿ ಮುಂತಾದ 11 ಬೇಡಿಕೆಗಳನ್ನು ಮಂಡಿಸಿ 1979 ಜೂನ್‌ನಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ಅಲ್ಲದೇ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ 15 ದಿನ ಮುಷ್ಕರ ಮಾಡಲಾಗಿತ್ತು. ಆ ಮುಷ್ಕರದ ಫಲವಾಗಿ ದಿನಗೂಲಿಯಲ್ಲಿ 50 ಪೈಸೆ ಹೆಚ್ಚಳದ ಹೊರತು ಬೇರೆ ಯಾವ ಬೇಡಿಕೆಯೂ ಈಡೇರಲಿಲ್ಲ.

ಇದೇ ಜುಲೈ 1 ರಂದು ನೂರಾರು ಜನ ಮೆರವಣಿಗೆಯಲ್ಲಿ ಬಂದು ತಮ್ಮ ಬೇಡಿಕೆಗಳಿಗೋಸ್ಕರ ಅಧಿಕಾರಿಗಳನ್ನು ಒತ್ತಾಯಿಸಿದರು. ರೋಸಿಹೋದ ಕಾರ್ಮಿಕರು 16-9-80ರಂದು ಮೂರು ಮೈಲು ದೂರದಿಂದ ನಗರಕ್ಕೆ ಮೆರವಣಿಗೆಯಲ್ಲಿ ಬಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಅರ್ಪಿಸಿದರು, ಅವರನ್ನು ಮಧ್ಯಸ್ಥಿಕೆ ವಹಿಸಲು ವಿನಂತಿಸಿಕೊಂಡರು, ಅಲ್ಲಿಗೂ ಏನೂ ಫಲ ದೊರೆಯದ ಕಾರಣ 19-9-80 ರಿಂದ ಕಾರ್ಮಿಕರು ಅನಿವಾರ್ಯವಾಗಿ ಮುಷ್ಕರಕ್ಕೆ ಇಳಿದಿದ್ದಾರೆ. ಕಿವುಡರಾಗಿರುವ ಅಧಿಕಾರಿಗಳ ವರ್ತನೆಯನ್ನು ಕೃಷಿಕೂಲಿಕಾರರ ಸಂಘವು ಉಗ್ರವಾಗಿ ಖಂಡಿಸಿ ಹೋರಾಟವನ್ನು ಮುಂದುವರಿಸಲು ತೀರ್ಮಾನಿಸಿದೆ, ಇಷ್ಟುದಿನ ಕೃಷಿಕೂಲಿಗಾರರನ್ನು, ನಿರುದ್ಯೋಗಿ ಯುವಕರನ್ನು ಸಂಘಟಿತ ಕಾರ್ಮಿಕರ ವಿರುದ್ಧ ಉಪಯೋಗಿಸುತ್ತಿದ್ದ ಜನವಿರೋಧಿ ಸರಕಾರಕ್ಕೆ ಈ ಕೃಷಿಕೂಲಿಗಾರರ ಹೋರಾಟ ನುಂಗಲಾರದ ತುತ್ತಾಗಿದೆ.

ಕೃಷಿ ವಿಶ್ವವಿದ್ಯಾಲಯದ ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಬಸಣ್ಣ ಪಟ್ಟೇಕರ ಇವರು, ತೊಂದರೆಯಲ್ಲಿರುವ ಬಡಪಾಯಿ ಕಾರ್ಮಿಕರ ಮುಷ್ಕರವನ್ನು ಯಶಸ್ವಿಗೊಳಿಸಲು ಎಲ್ಲರ ಸಹಕಾರ ಕೋರಿದ್ದಾರೆ.

●

ಪ್ರತಿಭಟನಾ ಮೆರವಣಿಗೆ

ದಿನಾಂಕ 27-9-80ರಂದು ಬೆಂಗಳೂರು ಎಸ್. ಎಫ್ ಐ. ಕಾರ್ಯಕರ್ತರು ಪತ್ರಿಕಾ ಕಛೇರಿಗಳ ಮೇಲಿನ ಧಾಳಿಮತ್ತು ರಾಷ್ಟ್ರೀಯ ಭದ್ರತಾ ಕಾಯ್ದೆಯ ಸುಗ್ರೀವಾಜ್ಞೆಯ ವಿರುದ್ಧ ಪ್ರತಿಭಟಿಸಿ ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆಯಲ್ಲಿ ತೆರಳಿ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು. ಈ ಮೆರವಣಿಗೆಯಲ್ಲಿ ಎ ಐ. ಎಸ್. ಎಫ್. ನ ಕೆಲವು ಪ್ರತಿನಿಧಿಗಳು ಸಹ ಭಾಗವಹಿಸಿದ್ದರು.

ರಾಜಭವನದ ಬಳಿ ವಿದ್ಯಾರ್ಥಿಗಳನ್ನುದ್ದೇಶಿಸಿ ರಾಜ್ಯಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಮಾತನಾಡಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ರಾಜ್ಯದಾದ್ಯಂತ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಬೇಕೆಂದು ಕರೆ ನೀಡಿದರು.

ನಗರ ಸಮಿತಿಯ ಸಹಸಂಚಾಲಕ ಕಾಂ. ಎನ್. ರಾಜಣ್ಣ ವಂದಿಸಿದರು.

●

ಪಾವೂರು ಪದವಿನಲ್ಲಿ ವಾರ್ಷಿಕೋತ್ಸವ

ಮಂಗಳೂರು ತಾಲ್ಲೂಕು ಪದವು ಯುವಜನ ಸಮಿತಿಯ ಪ್ರಥಮ ವಾರ್ಷಿಕೋತ್ಸವವು ದಿ॥ 13-9-1980ರಂದು ಶ್ರೀ ಕೆ. ಪಿ. ನಾರಾಯಣರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಯಾಗಿ ಶ್ರೀ ಬಾಬು ಪೂಜಾರಿಯವರು ಆಗಮಿಸಿದ್ದರು. ಅಧ್ಯಕ್ಷರು ಹಾಗೂ ಅತಿಥಿಗಳು ಯುವಕ ಸಂಘದ ಕರ್ತವ್ಯ ಮತ್ತು ಬೆಳವಣಿಗೆಯ ವಿಷಯದಲ್ಲಿ ಸೂಕ್ತ ಸಲಹೆಗಳನ್ನಿತ್ತರು.

ನಂತರ ಚಾಲ್ತಿ ವರ್ಷದ ಕಾರ್ಯಕಾರಿ ಸಮಿತಿಗೆ ಹೊಸ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ○

ಪೋಲೆಂಡಿನಲ್ಲಿ ಮುಷ್ಕರ ಹೋರಾಟಗಳನ್ನು ಕುರಿತು

ಸಮಾಜವಾದಿ ಪೋಲೆಂಡಿನ ಉದ್ದಕ್ಕೂ ಜುಲೈನಲ್ಲಿ ಭಾರಿ ಮುಷ್ಕರದ ಪ್ರವಾಹ ಹರಿಯಿತು. ಎರಡು ತಿಂಗಳ ನಂತರ ಸೆಪ್ಟೆಂಬರ್ ಮೊದಲ ವಾರದಲ್ಲಿ ಒಂದು ಒಪ್ಪಂದಕ್ಕೆ ಬರಲಾಯಿತು. ಕಾರ್ಮಿಕರ ಬೇಡಿಕೆಗಳು ಆರ್ಥಿಕ ಕಾರಣದಿಂದ ಹಿಡಿದು ಟ್ರೇಡ್‌ಯೂನಿಯನ್ ಹಕ್ಕುಗಳ ತನಕ ಇತ್ತು. ಸರಿಯಾದ ಮಾಹಿತಿ ಇಲ್ಲದೆ ಈ ಬೇಡಿಕೆಗಳ ಗುಣಾವಗುಣಗಳನ್ನು ಚರ್ಚಿಸುವುದು ನಮಗೆ ಕಷ್ಟವಾಗುತ್ತದೆ,

ಜನತೆ ದೊಡ್ಡ ತ್ಯಾಗಗಳನ್ನು ಮಾಡಿ, ಹೇಳತೀರದ ನೋವುಗಳನ್ನು ಅನುಭವಿಸಿದ ನಂತರ ಫ್ಯಾಸಿಸ್ಟ್ ಬಂಧನದಿಂದ ಬಿಡುಗಡೆ ಪಡೆದ ದೇಶವೊಂದರಲ್ಲಿ, ಕಳೆದ ಮೂವತ್ತು ವರ್ಷಗಳಿಂದ ಸಮಾಜವಾದಿ ಆರ್ಥಿಕ ಪುನರ್ರಚನೆ ಆಗುತ್ತಿರುವ ದೇಶವೊಂದರಲ್ಲಿ ಈ ಬೆಳವಣಿಗೆಗಳು ನಡೆದದ್ದು ತುಂಬ ಆತಂಕಕಾರಿಯಾದದ್ದು. ಈ ಮುಷ್ಕರ ಮತ್ತು ಅದರ ದೀರ್ಘ ಹಠಮಾರಿ ಸ್ವಭಾವ ಇವೆಲ್ಲವೂ ಪೋಲಿಷ್ ಸರ್ಕಾರ ಒಪ್ಪಿಕೊಂಡ ಹಾಗೆ "ತೀವ್ರ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟಿನ" ಆಳವನ್ನು ಸೂಚಿಸುತ್ತವೆ,

ಈ ಮುಷ್ಕರವು ಆಳುವ ಪೋಲಿಷ್ ಯುನೈಟೆಡ್ ವರ್ಕರ್ಸ್ ಪಾರ್ಟಿ, ಸರ್ಕಾರ ಮತ್ತು ಇಡೀ ನಾಯಕತ್ವವನ್ನು ಚೆನ್ನಾಗಿ ಅಲುಗಾಡಿಸಿದೆ. ಇದರ ಫಲವಾಗಿ ಪಕ್ಷ ಮತ್ತು ಸರ್ಕಾರದ ನಾಯಕತ್ವಗಳೆರಡರಲ್ಲೂ ವಿಪರೀತ ಬದಲಾವಣೆಗಳಾಗಿವೆ. ಸಮಾಜವಾದ ಮತ್ತು ಸಮಾಜವಾದದ ಧ್ಯೇಯಕ್ಕೆ ಬದ್ಧರಾದ ಜಗತ್ತಿನ ಕಮ್ಯುನಿಸ್ಟರೆಲ್ಲರಿಗೂ ಸಮಾಜವಾದಿ ಪೋಲೆಂಡಿನ ಈ ದುರಾದೃಷ್ಟಕರ ಬೆಳವಣಿಗೆಗಳು ಸಾಕಷ್ಟು ನೋವುಂಟು ಮಾಡಿದೆ.

ಶತ್ರುವಿನ ವಿಜೃಂಭಣೆ

ನಮ್ಮ ದೇಶವೂ ಸೇರಿದಂತೆ ಜಗತ್ತಿನ ಬೂರ್ಜ್ವಾ ಪತ್ರಿಕೋದ್ಯಮ ಈ ಸಮಾಜವಾದಿ ದೇಶದ ಮುಷ್ಕರ ಹೋರಾಟಗಳ ಬಗ್ಗೆ ರಸವತ್ತಾಗಿ ಚಿತ್ರಿಸಿತು. ಬಂಡವಾಳಶಾಹಿ ಜಗತ್ತು ತೀರ ಅಪಾಯಕಾರಿಯಾದ ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಂಥ ಸನ್ನಿವೇಶದಲ್ಲಿ ಇದರಿಂದ ನೆಮ್ಮದಿ ಕಂಡುಕೊಳ್ಳಲು ಪ್ರಯತ್ನಿಸಿದವು. ಈ "ಹಿಂಜರಿತ" 1981ರ ವರೆಗೂ ನಡೆಯಬಹುದು ಎಂದು ಭವಿಷ್ಯವನ್ನೂ ನುಡಿದವು. ಲಂಡನ್ನಿನ ದಿ ಟೈಮ್ಸ್‌ನಲ್ಲಿ ಬಂದ ಅರ್ರಿಗೋ ಲೆವಿ ಅವರ ಒಂದು ಲೇಖನ ಮತ್ತು ನಮ್ಮ ಬೂರ್ಜ್ವಾ ಪತ್ರಿಕೋದ್ಯಮ ಅದನ್ನು ಮತ್ತೆ ಅಚ್ಚುಮಾಡಿರುವುದು, ಇವೆಲ್ಲವೂ ಸಮಾಜವಾದಿ ಪೋಲೆಂಡಿನ ಕಾರ್ಮಿಕ ಅಶಾಂತಿಯ ಬಗ್ಗೆ ಬೂರ್ಜ್ವಾವರ್ಗ ಮತ್ತು ಅದರ ಹಿಂಬಾಲಕರು ನಡೆಸುತ್ತಿರುವ ವಿಜೃಂಭಣೆಯನ್ನು ತೋರಿಸುತ್ತವೆ.

ಪೋಲೆಂಡಿನ ಈ ಘಟನೆಯು, "ಕಮ್ಯುನಿಸ್ಟ್ ಸೈದ್ಧಾಂತಿಕರು ಹಿಂದೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬರುತ್ತದೆ ಎಂದು ವ್ಯರ್ಥವಾಗಿ ಊಹಿಸಿದ್ದ 'ಸಾಮಾನ್ಯ ಬಿಕ್ಕಟ್ಟಿ'ನಂತೆಯೇ ಕಮ್ಯುನಿಸ್ಟ್ ವ್ಯವಸ್ಥೆಯಲ್ಲೂ ಬಿಕ್ಕಟ್ಟು ತರುತ್ತದೆ" ಎಂದು ಆತ ವಿವರಿಸಿದ್ದಾನೆ. "ಈ ದಿನ ನಾವು ಸೋವಿಯೆತ್ ಸಾಮ್ರಾಜ್ಯದ ಅಂತ್ಯದ ಆರಂಭವನ್ನು ವೀಕ್ಷಿಸುತ್ತಿದ್ದೇವೆ" ಎಂಬ ಭರತವಾಕ್ಯವನ್ನೂ ಬರೆದಿದ್ದಾನೆ. ಪೋಲಿಷ್ ಕಾರ್ಮಿಕರ ಮುಷ್ಕರದ "ಷಾಕ್ ತರಂಗಗಳು ಪೂರ್ವ ಯೂರೋಪಿನ ಉದ್ದಕ್ಕೂ ಹರಡಿ, ಎಲ್ಲ ಅನ್ಯಾಯಯುತ ಆಳ್ವಿಕೆಗಳಿಗೆ ನಡುಕ ತರುತ್ತಿದೆ ಸೋವಿಯೆತ್ ಸಾಮ್ರಾಜ್ಯವನ್ನೂ ಕೊನೆಗೆ ನಡುಗಿಸುತ್ತಿದೆ" ಎಂದೂ ಆತ ಹೇಳಿದ್ದಾನೆ. ಕೊನೆಗೆ, "ಒಂದು ಕೊನೇ ಪ್ರಶ್ನೆ: ಸೋವಿಯೆತ್ ಸಾಮ್ರಾಜ್ಯ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಬಂದಿರುವ ಬಿಕ್ಕಟ್ಟಿಗೆ ಪಾಶ್ಚಾತ್ಯ ಜಗತ್ತು ಯಾವುದಾದರೂ ಸುಲಭ ಮಾರ್ಗವನ್ನು ತೋರಿಸಲು ಸಾಧ್ಯವೇ? ಎಂದು ಕೇಳಿ, ಇದು "ನಮ್ಮ ಮತ್ತು ಶಾಂತಿಯ ಹಿತವನ್ನು ಕುರಿತಿದೆ" ಎಂದಿದ್ದಾನೆ.

ಇತ್ತೀಚಿನ ಪೋಲಿಷ್ ಮುಷ್ಕರ ಹೋರಾಟಗಳಿಂದ ಬೂರ್ಜ್ವಾ ಸೈದ್ಧಾಂತಿಕರಿಗೆ ಉಕ್ಕುತ್ತಿರುವ ಸ್ಫೂರ್ತಿ ಇಂಥದ್ದು, ವಿಶ್ವದ ಸಮಾಜವಾದ ಮತ್ತು ಸೋವಿಯೆತ್ ಒಕ್ಕೂಟದ ಸಮಾಜವಾದದ ಬಗ್ಗೆ ಅವರಿಗಿರುವ ಆಕ್ರೋಶ ಅಂಥದ್ದು. ಅನೇಕ ವರ್ಷಗಳ ಹಿಂದೆಯೇ ಬಂಡವಾಳಶಾಹಿ ಬಿಕ್ಕಟ್ಟಿಗೆ ಸಿಕ್ಕಿಕೊಂಡಿರುವ ಯೂರೋಪ್ ಮತ್ತು ಅಮೇರಿಕಾದ ಬಂಡವಾಳಶಾಹಿ ದೇಶಗಳಲ್ಲಿ ನೂರಾರು ಮುಷ್ಕರ ಹೋರಾಟಗಳು, ರಾಷ್ಟ್ರದಾದ್ಯಂತ ಹೋರಾಟಗಳು ಕಳೆದ ಅನೇಕ ವರ್ಷಗಳಿಂದ ನಡೆಯುತ್ತಿವೆ. ಇದನ್ನು ನಿವಾರಿಸಲು ನಡೆಸುವ ಪ್ರತಿ ಹೊಸ ಪ್ರಯತ್ನದಿಂದಲೂ ಜಗತ್ತಿನ ಬಂಡವಾಳಶಾಹಿಯ ಬಿಕ್ಕಟ್ಟು ಇನ್ನಷ್ಟು ಹೆಚ್ಚುತ್ತಿದೆ. ಕೊಳೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ನೇತಾರರು ತಮ್ಮ ನಿರಾಶೆಯೊಳಗೆ ಈಗ "ಮಿತ ಅಣು ಯುದ್ಧ" ಫ್ಯಾಕ್ಟರಿಗಳು ಮತ್ತು ಕಟ್ಟಡಗಳನ್ನು ಹಾಗೇ ಉಳಿಸಿ, ಜೀವರಾಶಿಯನ್ನು ಮಾತ್ರ ನಾಶಮಾಡುವ "ಶುದ್ಧ ನ್ಯೂಟ್ರಾನ್ ಬಾಂಬ್" ಮತ್ತು ಸೋವಿಯೆತ್ ಒಕ್ಕೂಟದ ವಿರುದ್ಧ "ನಿಷೇಧ ಅಣು ಮುಷ್ಕರ" ಮುಂತಾದ್ದರ ಬಗ್ಗೆ ಮಾತನಾಡುತ್ತಿದ್ದಾರೆ. ಬಂಡವಾಳಶಾಹಿ ಜಗತ್ತಿನ ಈ ದಿವಾಳಿ ಸಿದ್ಧಾಂತಗಳು ಒಂದಲ್ಲ ಒಂದು ದೇಶದ ಕಮ್ಯುನಿಸ್ಟರ ಅಥವಾ ಒಂದಲ್ಲ ಒಂದು ಸಮಾಜವಾದಿ ದೇಶದ ತಪ್ಪುಗಳು, ಸೋಲುಗಳು ವೈಫಲ್ಯಗಳು ಮುಂತಾದ್ದರಿಂದ ಹುಟ್ಟಿಬಂದಿರುವುದರಲ್ಲಿ ಆಶ್ಚರ್ಯವಿಲ್ಲ.

ಚಾರಿತ್ರಿಕ ಸತ್ಯ

ಮಾರ್ಕ್ಸ್‌ವಾದ-ಲೆನಿನ್‌ವಾದದ ಬಗ್ಗೆ ಎಷ್ಟು ಕೊಳಕು ಆಕ್ರಮಣಗಳನ್ನು ನಡೆಸಿದ್ದರೂ ಸೋವಿಯೆತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳ ಮೇಲೆ ವಿಶ್ವ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಎಲ್ಲ ಥರದ ಸಣ್ಣ ದೊಡ್ಡ ಯುದ್ಧಗಳನ್ನು ಸಾರಿದ್ದರೂ ಸಹ, ಸಮಾಜವಾದ ಮತ್ತು ಸಮತಾವಾದಗಳು ಅಗಾಧವಾಗಿ ಬೆಳೆಯುತ್ತಿವೆ, ವಿಶ್ವ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಕುಸಿಯುತ್ತಿವೆ ಎಂಬುದು ನಿರ್ವಿವಾದವಾದ ಚಾರಿತ್ರಿಕ ಸತ್ಯ. ಹಾಗಿದ್ದೂ "ಸಮಾಜವಾದದ ಸಾಮಾನ್ಯ ಬಿಕ್ಕಟ್ಟು" ಮತ್ತು "ಸೋವಿಯೆತ್ ಸಾಮ್ರಾಜ್ಯಶಾಹಿ ಮತ್ತು ರಾಜಕೀಯ ವ್ಯವಸ್ಥೆ"ಯಲ್ಲಿ ಬಿಕ್ಕಟ್ಟು ಎಂದು ಈಗಲೂ ಮಾತನಾಡುವ ಹುಚ್ಚರು ಇದ್ದಾರೆ ಇದು. ಶೋಷಣಾ ವ್ಯವಸ್ಥೆಯನ್ನು ಎತ್ತಿಹಿಡಿದು ಬೆಂಬಲಿಸುವ, ಜೀವನ ಮತ್ತು ಚರಿತ್ರೆಯ ಸತ್ಯಗಳಿಂದ ಕಲಿಯಲು ಮತ್ತು ಆಲೋಚಿಸಲು ಆಗದಿರುವ ಅವರ ತೀವ್ರ ದಿವಾಳಿತನವನ್ನು ತೋರಿಸುತ್ತದೆಯಷ್ಟೆ.

ಎಂ. ಬಸವ ಪುನ್ನಯ್ಯ

ಆದರೂ ಮೂವತ್ತು ವರ್ಷಗಳಿಗೆ ಮೇಲ್ಪಟ್ಟು ಸಮಾಜವಾದಿ ಪುನರ್ರಚನೆಯ ನಂತರ ಪೋಲೆಂಡಿನಂಥ ಸಮಾಜವಾದಿ ದೇಶವೊಂದರಲ್ಲಿ ನಡೆದ ಕಾರ್ಮಿಕ ಮುಷ್ಕರದಂಥ ದುರಾದೃಷ್ಟಕರ ಬೆಳವಣಿಗೆಯು, ಬಂಡವಾಳಶಾಹಿ ವ್ಯವಸ್ಥೆಯ ಬೆಂಬಲಿಗರಿಗೆ, ಸಮಾಜವಾದ ಮತ್ತು ಸಮತಾವಾದಗಳ ಉದಾತ್ತ ಧ್ಯೇಯಗಳನ್ನು ವಿಕೃತಗೊಳಿಸಿ, ಅಪಚಾರಮಾಡಲು ಆಹಾರವನ್ನು ಒದಗಿಸಿದೆ.

ಬಂಡವಾಳಶಾಹಿ ದೇಶಗಳಲ್ಲಿ ನೂರಾರು ಸಾವಿರಾರು ಮುಷ್ಕರನಿರತ ಕಾರ್ಮಿಕರನ್ನು ಬಂಧಿಸಿ, ಹಿಂಸೆಗೊಳಿಸಿ, ಗುಂಡಿಕ್ಕಿ ಕೊಂದಾಗ, ಕಾರ್ಮಿಕರ ಮುಷ್ಕರ ಮತ್ತು ಸಂಘಟನಾ ಹಕ್ಕುಗಳನ್ನು ಕಿತ್ತುಕೊಂಡಾಗ ಪ್ರತಿಭಟನೆಯ ದನಿಯೆತ್ತಲು, ಈ ಕಮ್ಯುನಿಸ್ಟ್ ವಿರೋಧಿಗಳಿಗೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಬಾಡಿಗೆ ಕರಣಿಕರಿಗೆ ಒಂದು ಎಳೆಯಷ್ಟು ಧೈರ್ಯ, ಅಂತರಾತ್ಮ ಇರುವುದಿಲ್ಲ. ಆದರೆ ಪೋಲಿಷ್ ಮುಷ್ಕರ- ಹೋರಾಟದ ಬಗ್ಗೆ ಸೊಲ್ಲೆತ್ತುವ ಕೀಳುತನ ಮಾತ್ರ ಅವರಿಗಿದೆ ಅಲ್ಲದೆ ಪೋಲಿಷ್ ಸಮಾಜವಾದಿ ಸರ್ಕಾರವು ಇದನ್ನು ಅಧಿಕಾರ ಮತ್ತು ಹಿಂಸೆಯನ್ನು ಬಳಸದೆ ಶಾಂತಿಯುತವಾಗಿ ಪರಿಹರಿಸಲು ಪ್ರಯತ್ನಿಸುತ್ತಿರುವುದರ ಬಗೆಯೂ ಅವರಿಗೆ ಅಸಂತೋಷವಿದೆ. ಇಂಥದೇ ಸನ್ನಿವೇಶದಲ್ಲಿ ಯಾವುದೇ ಬಂಡವಾಳಶಾಹಿ ದೇಶವು ಕಾರ್ಮಿಕರೊಡನೆ ಹೇಗೆ ನಡೆದುಕೊಳ್ಳುತ್ತಿತ್ತು, ಒಂದು ಸಮಾಜವಾದಿ ದೇಶ ಹೇಗೆ ನಡೆದುಕೊಂಡಿದೆ ಎಂಬುದರ ಹೋಲಿಕೆ ಇಲ್ಲದೆ.

ಈ ಪೋಲಿಷ್ ಮುಷ್ಕರ ಹೋರಾಟದಿಂದ ಪೋಲೆಂಡಿನ ಕಮ್ಯುನಿಸ್ಟರೂ ಮತ್ತು ಜಗತ್ತಿನ ಎಲ್ಲ ಕಮ್ಯುನಿಸ್ಟರು ಸರಿಯಾದ ಪಾಠಗಳನ್ನು ಕಲಿಯಬೇಕಾದ್ದು ಅನಿವಾರ್ಯ. ಮುಷ್ಕರ ಹೋರಾಟಕ್ಕೆ ದಾರಿ ಮಾಡಿದ ತಪ್ಪುಗಳನ್ನು ನಿವಾರಿಸುವುದೂ ಅವರ ಮೇಲಿದೆ.

ತೀವ್ರ ತಪ್ಪುಗಳು

ಮುಷ್ಕರನಿರತ ಕಾರ್ಮಿಕರು ಮತ್ತು ಪೋಲೆಂಡಿನ ಸಮಾಜವಾದಿ ಸರ್ಕಾರದ ನಡುವೆ ಆದ ಶಾಂತಿಯುತ ಒಪ್ಪಂದವನ್ನು ಗಮನಿಸುತ್ತಾ ಮತ್ತು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವ ಮತ್ತು ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವ ಪೋಲಿಷ್ ಯುನೈಟೆಡ್ ವರ್ಕರ್ಸ್ ಪಾರ್ಟಿ ಮತ್ತು ಸರ್ಕಾರದ ಪ್ರಯತ್ನಗಳಲ್ಲಿ ಸಾಫಲ್ಯ ಸಿಗಲೆಂದು ಆಶಿಸುತ್ತಾ ನಾವು ಈ ದುರಂತ ಬೆಳವಣಿಗೆಗೆ ದಾರಿಮಾಡಿದ ವೈಫಲ್ಯಗಳು ಮತ್ತು ತಪ್ಪುಗಳ ಬಗ್ಗೆ ನಾವು ಪರೀಕ್ಷೆ ನಡೆಸದೆ ಬಿಡುವಂತಿಲ್ಲ.

ಪೋಲಿಷ್ ಯುನೈಟೆಡ್ ವರ್ಕರ್ಸ್ ಪಾರ್ಟಿಯ ಕೇಂದ್ರಸಮಿತಿಯ ಹೊಸ ಚುನಾಯಿತ ಮೊದಲ ಕಾರ್ಯದರ್ಶಿ ಸ್ಟಾನಿಸ್ಲಾ ಕಾನಿಯ ಅವರ ಕೆಲವು ಮಾತುಗಳು ಮತ್ತು ಪೋಲಿಷ್ ಸಂಸತ್ತಿನಲ್ಲಿ ಚರ್ಚೆ ಆದಾಗ ಅನೇಕ ಸದಸ್ಯರು ಮಾಡಿದ ಟೀಕೆಗಳು ಇವು ತುಂಬ ಎಚ್ಚರಿಕೆಯಿಂದ ಆಡಿದವಾಗಿದ್ದರೂ, ಸದ್ಯದ ಬಿಕ್ಕಟ್ಟಿನ ಆಳ ಮತ್ತು ತಪ್ಪುಗಳ ಮಟ್ಟವನ್ನು ತೋರಿಸುತ್ತವೆ.

ಮುಷ್ಕರದ ಬಗ್ಗೆ ಹೇಳುತ್ತಾ ಸ್ಟಾನಿಸ್ಲಾ ಕಾನಿಯ ಅವರು, "ಈ ಪ್ರತಿಭಟನೆಯು ಸಮಾಜವಾದದ ನಿಯಮಗಳ ವಿರುದ್ಧ ಅಲ್ಲ, ನಮ್ಮ ಮೈತ್ರಿಗಳ ವಿರುದ್ಧ ಅಲ್ಲ, ನಮ್ಮ ಪಕ್ಷದ ನಾಯಕತ್ವದ ಬಗ್ಗೆ ಅಲ್ಲ. ಅದು ನಮ್ಮ ನೀತಿಗಳಲ್ಲಿನ ತಪ್ಪುಗಳ ವಿರುದ್ಧ. ಮುಷ್ಕರದ ಒಪ್ಪಂದಗಳೆಲ್ಲವೂ ನೆರವೇರುವಂತೆ ನಾವು ಯತ್ನಿಸುತ್ತೇವೆ" ಅಲ್ಲದೆ, "ಪ್ರಜಾಪ್ರಭುತ್ವ ಎನ್ನುವುದು, ಸಮಾಜದ ಬಗ್ಗೆ ಒಂದು ಅಧಿಕಾರದ ಚಿಹ್ನೆ ಅಲ್ಲ. ಅದರೆ ಸಮಾಜವಾದದ ಶ್ರೇಷ್ಠವಾದ ಅಗತ್ಯ ಅದು. ಆದ್ದರಿಂದಲೇ ನಾವು ಪೋಲಿಷ್ ಸಂಸತ್ತಿನ ಸಂವಿಧಾನಾತ್ಮಕ ಕ್ರಮಗಳನ್ನು ಸಂಪೂರ್ಣವಾಗಿ ಅನುಸರಿಸಲು, ಜನತಾ ಮಂಡಲಿಗಳ ಅಧಿಕಾರವನ್ನು ವಿಸ್ತರಿಸಲು, ಟ್ರೇಡ್ ಯೂನಿಯನ್‌ಗಳಿಗೆ ನಿಜವಾದ ಪುನರುಜ್ಜೀವನಕೊಡಲು ನಿರ್ಧರಿಸಿದ್ದೇವೆ. ಅಲ್ಲದೆ, ಸಮಾಜವಾದದ ಆಧಾರದ ಮೇಲೆ ಟ್ರೇಡ್‌ಯೂನಿಯನ್‌ಗಳ ಸಂಘಟಕರು ಘೋಷಿಸಿದ ಹಾಗೆ ಹೊಸ ಟ್ರೇಡ್‌ಯೂನಿಯನ್‌ಗಳು ಬೆಳೆಯಲು ಮತ್ತು ಸಮಾಜವಾದಿ ಪ್ರಜಾಪ್ರಭುತ್ವದ ಸಂಪರ್ಕವಾಗಿ ಅವು ಕೆಲಸಮಾಡಲು ಅವಕಾಶ ನೀಡಲೂ ನಾವು ನಿರ್ಧರಿಸಿದ್ದೇವೆ".

ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟು

ದೇಶವು "ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟಿನಲ್ಲಿ" ಸಿಕ್ಕಿಹಾಕಿಕೊಂಡಿದೆ ಮತ್ತು ಅವು "ಪೋಲಿಷ್ ಆರ್ಥಿಕತೆಯು ಎದುರಿಸುತ್ತಿರುವ ಕಷ್ಟಗಳ ಮಟ್ಟವನ್ನು ತೋರಿಸುತ್ತವೆ" ಎಂದು ಹೊಸದಾಗಿ ನೇಮಕಗೊಂಡ ಪ್ರಧಾನಿ ಜೋಸೆಫ್ ಪಿಂಕೋಸ್ಕಿ ಹೇಳಿದ್ದಾರೆ.

ಪೋಲಿಷ್ ಸಂಸತ್ ಚರ್ಚೆಯಲ್ಲಿ ಭಾಗವಹಿಸಿದ ಸಂಸತ್ ಸದಸ್ಯರನೇಕರು ಈ ಬಿಕ್ಕಟ್ಟಿನ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ ಪಕ್ಷ ನಾಯಕತ್ವ ತೋರಿಸುವುದು, ಸರ್ಕಾರ ಆಳುವುದು ನಿಯಮ ಅನುಸರಿಸಿದಾಗ ಮಾತ್ರ ಈ ಬಿಕ್ಕಟ್ಟು ಮತ್ತೆ ಬರದಂತೆ ತಡೆಯಲು ಸಾಧ್ಯ ಎಂದೊಬ್ಬ ಸದಸ್ಯರು ಹೇಳಿದ್ದಾರೆ. ಇನ್ನೊಬ್ಬರು ದೇಶ ಬಿಕ್ಕಟ್ಟಿನತ್ತ ಹೋಗುತ್ತಿದೆ ಎಂದು ಎಲ್ಲರಿಗೂ ಗೊತ್ತಿತ್ತು, ಆದರೆ ಸರ್ಕಾರವಾಗಲೀ ಸಮೂಹ ಮಾಧ್ಯಮವಾಗಲೀ ಈ ಬಗ್ಗೆ ಮಾತನಾಡಲಿಲ್ಲ. ಬಿಕ್ಕಟ್ಟು ರಾಜಕೀಯ ಜೀವನದ ಅನೇಕ ವಲಯಗಳಲ್ಲಿ ಮತ್ತು ಮಟ್ಟಗಳಲ್ಲಿ ಬಂತು ಎಂದು ಹೇಳಿದ್ದಾರೆ. ಅನೇಕ ವರ್ಷಗಳಿಂದ ಸಮೂಹ ಮಾಧ್ಯಮ ಕೆಟ್ಟದಾಗಿ ಕಾರ್ಯ ನಿರ್ವಹಿಸುತ್ತಿತ್ತು, ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಬಗ್ಗೆ ಚರ್ಚೆಗಳು

(6ನೇ ಪುಟ ನೋಡಿ)

ಹೊಸ ಯೋಜನೆಯ ಚೌಕಟ್ಟು :

ಆರನೇ ಯೋಜನೆಯ ಚೌಕಟ್ಟಿನ ಬಗ್ಗೆ ಮಾತನಾಡುತ್ತಾ ಕಾಂ. ರಣದಿವೆ ಅವರು, ಬಂಡವಾಳಶಾಹಿ ಜಗತ್ತಿನಲ್ಲಿ ಹಿಂಜರಿತ, ನಮ್ಮ ಆರ್ಥಿಕತೆಯ ಕುಸಿತ, ತೈಲದ ವಿಪರೀತ ಬೆಲೆ, ನಮ್ಮ ರಫ್ತುಗಳಿಗೆ ಅಡ್ಡಿಮಾಡುವ ವಿದೇಶದ ಕೆಲವು ರಕ್ಷಣೆಯ ತಂತ್ರಗಳು, ಇದರಿಂದ ಉಂಟಾಗುವ ಉದ್ಯಮಗಳ ಮುಚ್ಚುವಿಕೆ, ಇವೆಲ್ಲವೂ ನಮ್ಮ ಜನತೆ ಮತ್ತು ಕಾರ್ಮಿಕ ವರ್ಗಕ್ಕೆ ಕಷ್ಟ ಪರಿಸ್ಥಿತಿಯನ್ನು ತರುತ್ತವೆ ಎಂದರು. ಇದನ್ನು ಯೋಜನಾ ಆಯೋಗ ರಚಿಸಿರುವ ಯೋಜನಾಚೌಕಟ್ಟಿನಲ್ಲಿ ಕಾಣಬಹುದು. ದೇಶದಲ್ಲಿ ತಾವು ಹಿಂದೆ ಅನುಸರಿಸಿದ ನೀತಿಗಳಿಂದ ಉಂಟಾಗಿರುವ ವಿನಾಶದಿಂದ ಕಾಂಗ್ರೆಸ್ (ಐ)ನವರು ಏನು ಪಾಠವನ್ನೂ ಕಲಿತಿಲ್ಲ ಎಂಬುದನ್ನು ಯೋಜನೆಯ ಚೌಕಟ್ಟು ನೋಡಿದ ತಕ್ಷಣ ತಿಳಿಯಬಹುದು. ಯೋಜನೆಯ ಚೌಕಟ್ಟಿನಲ್ಲಿ, ಗುತ್ತೇದಾರಿಗಳು ಮತ್ತು ಭಾರಿ ಹಣದ ಅಧಿಕಾರವನ್ನು ನಿರ್ಮೂಲ ಮಾಡುವ ಯಾವ ಸಲಹೆಯೂ ಇಲ್ಲ. ಸಂಪತ್ತಿನ ಕೇಂದ್ರೀಕರಣ, ಇಪ್ಪತ್ತು ಉದ್ಯಮಿಗಳ ಕೈಯಲ್ಲಿ ಇಡೀ ಬಂಡವಾಳ, ಹಣದ ಅಧಿಕಾರ ಇವೆಲ್ಲಾ ಸಂಬಂಧಿಸಿದ ಶಾಸನಗಳೆಲ್ಲವೂ ಹುಸಿಯಾಗಿವೆ. ಇದರ ಫಲವಾಗಿ ಭೂಮಿಯ ವಿತರಣೆ ಆಗುವುದರ ಬದಲು ಕೇಂದ್ರೀಕರಣ ಹೆಚ್ಚಿದೆ. ಹೆಚ್ಚುವರಿ ಭೂಮಿಯನ್ನು ರಾಜ್ಯ ಸರ್ಕಾರಗಳು ವಶಪಡಿಸಿಕೊಂಡಿಲ್ಲ. ಜ್ಯೋತಿಬಸು, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಹೇಳಿದ ಹಾಗೆ "400 ಮಿಲಿಯನ್ ಹೆಚ್ಚುವರಿ ಭೂಮಿಯಲ್ಲಿ ಸರ್ಕಾರವು 40 ಮಿಲಿಯನ್ ಭೂಮಿಯನ್ನು ಕೂಡ ವಿತರಣೆಗೆಂದು ವಶಪಡಿಸಿಕೊಳ್ಳಲಾಗಿಲ್ಲ."

ಹೊಸ ಭಾರಗಳು :

ಬಡವರ ಏಳಿಗೆ, ಉದ್ಯೋಗ ಕಲ್ಪಿಸುವುದು, ಹೊಸ ಶಿಕ್ಷಣ ವ್ಯವಸ್ಥೆ ಮುಂತಾದ ಮಾತುಗಳೆಲ್ಲ ಹೊಸ ಯೋಜನೆಯ ಚೌಕಟ್ಟಿನಲ್ಲೂ ಇವೆ. ಜೊತೆಗೆ ರಾಷ್ಟ್ರೀಯ ಆದಾಯದಲ್ಲಿ ಶೇಕಡಾ ಐದರ ಏರಿಕೆ ಎಂಬ ಮುಟ್ಟಲಾಗದ ಗುರಿಯನ್ನೂ ಯೋಜನೆ ಹೊಂದಿದೆ, ಆದರೆ ಅದು ಸಲಹೆಮಾಡುವ ಕ್ರಮಗಳಿಂದ ಜನತೆಯ ಮೇಲಿನ ಭಾರ ಹೆಚ್ಚುತ್ತದೆ; ಅವರ ಜೀವನ ಪರಿಸ್ಥಿತಿ ಇನ್ನೂ ಹದಗೆಡುತ್ತದೆ.

19,000 ಕೋಟಿ ರೂ.ಗಳ ಹೊಸ ಸಂಪನ್ಮೂಲಗಳ ಬಳಕೆಗೆ ಯೋಜನಾ ಚೌಕಟ್ಟು ಉದ್ದೇಶಿಸಿದೆ. ಇದರ ಕಾರ್ಮಿಕರ ಮತ್ತು ನಗರವಾಸಿಗಳ ಜೀವನವೆಚ್ಚ ತುಂಬ ಜಾಸ್ತಿಯಾಗುತ್ತದೆ. ಹಣದುಬ್ಬರ ತಡೆಯಲು ಯೋಜನಾಕಾರರು ಹುಡುಕುವ ಮಾರ್ಗ ಇದೇ!

ವಿಶ್ವಬ್ಯಾಂಕಿನ ಒತ್ತಾಯಗಳು :

ಇವೆಲ್ಲವನ್ನೂ ವಿಶ್ವಬ್ಯಾಂಕಿನ ಒತ್ತಾಯದ ಮೇರೆಗೆ ಮಾಡಲಾಗುತ್ತಿದೆ. ಸಬ್ಸಿಡಿಗಳನ್ನು ನಿಲ್ಲಿಸಲು ಅದು ಸೂಚನೆ ಕೊಟ್ಟಿತ್ತು. ಐದು ವರ್ಷಗಳ ಹಿಂದೆ ವಿಶ್ವ ಬ್ಯಾಂಕ್, ದುಡಿಮೆಗಾರರಿಗೆ ನೀಡುವ ಎಲ್ಲ ಸವಲತ್ತುಗಳು ಮತ್ತು ಕಲ್ಯಾಣ ಕ್ರಮಗಳನ್ನು ನಿಲ್ಲಿಸಬೇಕೆಂದು ಹೇಳಿತ್ತು. ಈಗ ಅದು ಭಾರತೀಯ ಕಾರ್ಮಿಕರು ಹೆಚ್ಚು ಊಟ ತಿನ್ನಬಾರದು ತಿನ್ನದ ಹಾಗೆ ಬೆಲೆ ಏರಿಸಬೇಕು ಎಂದು ಒತ್ತಾಯಿಸಿದೆ, ಇಲ್ಲದಿದ್ದರೆ ವಿದೇಶಿ ಸಾಲಗಳನ್ನು ತೀರಿಸಲು ಹೆಚ್ಚುವರಿ ಹಣ ಹುಟ್ಟುವುದಿಲ್ಲ.

ಇದರಂತೆ ವಿಶ್ವಬ್ಯಾಂಕಿನ ಇನ್ನೊಂದು ಒತ್ತಾಯವಾದ ರಫ್ತು ಸಬ್ಸಿಡಿ ರದ್ದನ್ನೂ ಆಲೋಚಿಸಲಾಗುತ್ತಿದೆ. ಈ ಬಗ್ಗೆ ಅಮೆರಿಕದ ಸರ್ಕಾರ ಕೂಡ ಸೂಚನೆ ಕೊಟ್ಟಿತ್ತು. ಅದು 400 ಮಿಲಿಯನ್ ಬೆಲೆಯ ಭಾರತೀಯ ಸರಕುಗಳಿಗೆ ವಿಪರೀತ ಸುಂಕ ಹಾಕುತ್ತೇವೆಂದು ಹೇಳಿ ರಫ್ತು ಸಬ್ಸಿಡಿಗೆ, ಆಕ್ಷೇಪಣೆ ಎತ್ತಿತ್ತು.

ಬೆಲೆಗಳ ಇಳಿತ ಇಲ್ಲ :

ಬೆಲೆನಿಯಂತ್ರಣದ ಬಗ್ಗೆ ಯೋಜನಾಕಾರರು ಏನು ಹೇಳುತ್ತಾರೆ? ಈ ಬಗ್ಗೆ ಯಾವ ಭರವಸೆಯೂ ಇಲ್ಲ. ಈಗಿರುವ ಮಟ್ಟದಲ್ಲೇ ಉಳಿಸಬಹುದೆಂಬ ಸೂಚನೆ ಇದೆ. ಸರ್ಕಾರದ ಹಣಕಾಸು ನೀತಿ ಹೀಗಿರುವುದರಿಂದ ಬೆಲೆಗಳು ಇನ್ನೂ ಏರಲಿವೆ.

ಕಾರ್ಮಿಕವರ್ಗ ಮತ್ತು ಯೋಜನೆ :

ಕಾಂಗ್ರೆಸ್ (ಐ)ನ ಘೋಷಣಾ ಪತ್ರದ ಹಾಗೆಯೇ ಯೋಜನಾ ಚೌಕಟ್ಟಿನಲ್ಲೂ ಕಾರ್ಮಿಕರ ಬಗ್ಗೆ ಈ ಮಾತುಗಳಿವೆ. "ದೇಶಕ್ಕೆ ಕಷ್ಟವನ್ನೂ ಉತ್ಪಾದನೆಗೆ ನಷ್ಟವನ್ನೂ ತರುವ ಕೈಗಾರಿಕಾ ಅಶಾಂತಿಯನ್ನು ಕಡಿಮೆ ಮಾಡಲು ಒಂದು ಪರಿಣಾಮಕಾರಿ ಉಪಾಯವನ್ನು ಕಂಡುಹಿಡಿಯುವುದು ಅಗತ್ಯ. ಇದರ ಅಂಗವಾಗಿ ಕೈಗಾರಿಕೆಯಲ್ಲಿ ಕಾರ್ಮಿಕರು ಭಾಗವಹಿಸುವುದನ್ನು ಪ್ರೋತ್ಸಾಹಿಸಬೇಕು. ಉತ್ಪಾದನೆಯನ್ನು ಹೆಚ್ಚಿಸಬೇಕು. ಒಂದು ಒಪ್ಪಿತ ಉಪಾಯವನ್ನು ರೂಪಿಸಲು ಕಾರ್ಮಿಕರು ಮತ್ತು ಉದ್ಯೋಗಿಗಳ ಪ್ರತಿನಿಧಿಗಳೊಂದಿಗೆ ಮೊದಲು ಮಾತುಕತೆ ನಡೆಸಬೇಕು."

ಯಾರ ಭಾಗವಹಿಸುವಿಕೆ ಯೋಜನೆಯ ಸಫಲತೆಗೆ ತೀರ ಮುಖ್ಯವೋ ಅಂಥ ಕಾರ್ಮಿಕರ ಬಗ್ಗೆ ಯೋಜನಾಕಾರರಿಗಿರುವ ದೃಷ್ಟಿ ಇದು. ಯೋಜನಾಕಾರರು ಗುತ್ತೇದಾರಿಗಳಿಗೆ ಹೊಸ ರಿಯಾಯಿತಿಗಳನ್ನು ತೋರಿಸಲು ತಯಾರಾಗಿದ್ದಾರೆ. ಆದರೆ ಕಾರ್ಮಿಕರ ಬಗ್ಗೆ ಮಾತ್ರ ಒಂದಿಷ್ಟೂ ಉದಾರ ಧೋರಣೆಯನ್ನು ತೋರಿಸುವ ನಟನೆಯನ್ನೂ ಮಾಡುವುದಿಲ್ಲ.

ಕಾರ್ಮಿಕ ವರ್ಗಕ್ಕೆ ನೋವುಗಳೂ ಇಲ್ಲ, ನ್ಯಾಯವಾದ ಬೇಡಿಕೆಗಳೂ ಇಲ್ಲ ಎಂದು ಅವರು ತೀರ್ಮಾನಿಸಿದೆ. ಯೋಜನಾ ಚೌಕಟ್ಟಿನಲ್ಲಿ ಅವರು ಟ್ರೇಡ್‌ಯೂನಿಯನ್ ಚಳುವಳಿ, ಅದರಲ್ಲೂ ಸಿ.ಐ.ಟಿ.ಯು. ಕಾರ್ಮಿಕರ ಭಾಗವಹಿಸುವಿಕೆಗೆ ಒತ್ತಾಯಿಸುತ್ತಿದೆ. ಇಂಥ ಸಹಕಾರ ಯೋಜನಾಕಾರರ ಅರ್ಥದಲ್ಲಿಲ್ಲ.

ಏರುತ್ತಿರುವ ನಿರುದ್ಯೋಗ:

ದಾಖಲಾದ ನಿರುದ್ಯೋಗಿ ಜನತೆಯ ಮೂಲಕ ನಮ್ಮ ಆರ್ಥಿಕತೆಯ ಶೋಚನೀಯ ಸ್ಥಿತಿಯನ್ನು ಅರಿತುಕೊಳ್ಳಬಹುದು. 1970ರಲ್ಲಿ ದಾಖಲಾದ ನಿರುದ್ಯೋಗಿಗಳು 40.7 ಲಕ್ಷ ಇದ್ದರೆ, 1980ರ ಕೊನೆಗೆ 144 4 ಲಕ್ಷದಷ್ಟಾಗಿದ್ದಾರೆ.

ಟ್ರೇಡ್‌ಯೂನಿಯನ್ ಚಳುವಳಿಯು, ದುಡಿಮೆ ಹಕ್ಕನ್ನು ಮೂಲಭೂತ ಹಕ್ಕಾಗಿ ಗಣಿಸುವಂತೆ ಮತ್ತು ಅಲ್ಲಿಯವರೆಗೆ ನಗರ ಮತ್ತು ಗ್ರಾಮೀಣ ನಿರುದ್ಯೋಗಿಗಳೆಲ್ಲರಿಗೆ ನಿರುದ್ಯೋಗ ಪರಿಹಾರ ನೀಡುವಂತೆ ಪದೇ ಪದೇ ಒತ್ತಾಯಿಸುತ್ತಿದೆ. ಆದರೆ ಕಾಂಗ್ರೆಸ್ (ಐ) ಸರ್ಕಾರ ಇದನ್ನು ನಿರಾಕರಿಸಿದೆ.

ಈ ಬಗ್ಗೆ ನಾವು ಇತರ ಸಂಘಟನೆಗಳ ಜೊತೆ ಸಮಾಲೋಚಿಸಿ, ರಾಷ್ಟ್ರೀಯ ಸಮಾವೇಶಗಳನ್ನು ನಡೆಸಿ, ದೇಶದಾದ್ಯಂತ ನಿರುದ್ಯೋಗ ಪರಿಹಾರ

ಟ್ರೇಡ್‌ಯೂನಿಯನ್ ಚಳುವಳಿಯ ಐಕ್ಯತೆಗೆ ರಣದಿವೆ ಕರೆ

ಸೆಪ್ಟೆಂಬರ್ 11ರಿಂದ 14ರ ವರೆಗೆ ಕೇರಳದ ಕಣ್ಣಾನೂರಿನಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್‌ಯೂನಿಯನ್‌ನ ಜನರಲ್ ಕೌನ್ಸಿಲ್ ಸಭೆ ಸೇರಿತ್ತು. ಆಗ ಭಾಷಣ ಮಾಡಿದ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಬಿ. ಟಿ. ರಣದಿವೆ ಅವರು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ನಡೆಸುವ ಹೋರಾಟದಲ್ಲಿ ತುಂಬ ಪ್ರಮುಖವಾದ ಅಂಶವಾಗುವ ಟ್ರೇಡ್‌ಯೂನಿಯನ್ ಐಕ್ಯತೆಯನ್ನು ಬೆಳೆಸಲು ಕರೆ ಕೊಟ್ಟರು. "ನಾವು ಒಗ್ಗಟ್ಟಿನಿಂದ ಒಂದಾದರೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಐಕ್ಯತೆಯ ಶಕ್ತಿಗಳ ಬಲ ಇನ್ನಷ್ಟು ಹೆಚ್ಚುತ್ತದೆ. ಅವರ ಹೋರಾಡುವ ಶಕ್ತಿ ಹೆಚ್ಚಿ, ಅವರು ಸರ್ವಾಧಿಕಾರವನ್ನು ಮತ್ತೆ ಹೇರುವ ಪ್ರಯತ್ನಗಳನ್ನು ನಾಶಗೊಳಿಸಲು ಸಾಧ್ಯವಾಗುತ್ತದೆ" ಎಂದು ಅವರು ಹೇಳಿದರು. ಅವರ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಇರುವಾಗ ಏನಾದರೂ ಅಭಿವೃದ್ಧಿ ಆಗಲು ಸಾಧ್ಯವೇ?

ಯೋಜನೆಯಲ್ಲಿ ಖಾಸಗಿ ವಲಯದ ನಿಯಂತ್ರಣದ ಮಾತಿಲ್ಲ ಆದರ ಬದಲು ಅದನ್ನು ವಿಸ್ತರಿಸುವ ಭರವಸೆ ಇದೆ. ಹಾಗೆಯೇ ಬಹುದೇಶಿ ಕಂಪನಿಗಳ ಬಗ್ಗೆ ಯೋಜನೆ ಏನನ್ನೂ ಹೇಳಿಲ್ಲ. ಅವರು ದುಡಿಮೆಗಾರರನ್ನು ಶೋಷಿಸುತ್ತಿರುವುದು, ಔಷಧಿ ಉದ್ಯಮದಲ್ಲಿ ಅವರು ಕಾನೂನನ್ನು ಉಲ್ಲಂಘಿಸುತ್ತಿರುವುದು ಯಾವುದರ ಬಗ್ಗೆಯೂ ಮಾತಿಲ್ಲ.

ಭೂಸುಧಾರಣೆಗಳು :

ಮೂಲಭೂತವಾಗಿ ಭೂಸಂಬಂಧಗಳು ಬದಲಾದ ಹೊರತು ಕೈಗಾರಿಕಾ ಮುನ್ನಡೆ ಆರ್ಥಿಕ ತಳಹದಿ ಒದಗಿಸಲು ಸಾಧ್ಯವಿಲ್ಲ ಎಂಬುದನ್ನು ಆಳುವವರ ಹೊರತು ಮಿಕ್ಕೆಲ್ಲರೂ ಒಪ್ಪಿಕೊಳ್ಳುತ್ತಾರೆ. ಆಳುವ ಪಕ್ಷವೂ ಭೂಸುಧಾರಣೆಗಳ ಬಗ್ಗೆ ಮಾತನಾಡುತ್ತದೆ. ಆದರೆ ಅದು ಸದಾ ಜಪಿಸಬೇಕಾದ ಮಂತ್ರವೇ ಹೊರತು ಜಾರಿಗೊಳಿಸಬೇಕಾದ್ದಿಲ್ಲ ಎಂದುಕೊಂಡಿದೆ. ರಾಜಕೀಯ ನಿರ್ಧಾರಬೇಕು ಎಂದು ಆಳುವ ಪಕ್ಷ ಎಲ್ಲ ಕಡೆ ಹೇಳುತ್ತದೆ. ಆದರೆ ಕೇರಳ ಸರ್ಕಾರ ಜಾರಿಮಾಡಿದ ಪ್ರಗತಿಶೀಲ ಭೂಶಾಸನಕ್ಕೆ ಇನ್ನೂ ರಾಷ್ಟ್ರಪತಿಯವರ ಒಪ್ಪಿಗೆ ಸಿಕ್ಕಿಲ್ಲ. ಕಳೆದ ಮೂರು ದಶಕಗಳಲ್ಲಿ ಭೂಮಿತಿಗೆ

ಜೊತೆಗೆ ಇಡೀ ಯೋಜನಾ ಅವಧಿಯಲ್ಲಿ 7500 ಕೋಟಿ ರೂ.ಗಳ ಹೊಸ ತೆರಿಗೆಯನ್ನೂ ಉದ್ದೇಶಿಸುತ್ತದೆ. ಈ ಕಳೆದ ಮೂರು ದಶಕಗಳಲ್ಲಿ ಆದಹಾಗೆ, ಈ ಹೊಸ ಭಾರ ಜನಸಾಮಾನ್ಯರ ಮೇಲೆ ಪರೋಕ್ಷ ತೆರಿಗೆಯಾಗಿ ಎರಗಲಿದೆ. ದೇಶದ ಒಟ್ಟು ತೆರಿಗೆ ಸಂಪನ್ಮೂಲಗಳಲ್ಲಿ ಶೇ. 80 ರಷ್ಟು ಪರೋಕ್ಷ ತೆರಿಗೆ ಈಗಾಗಲೇ ಇದೆ. ಇದು ಆರನೇ ಯೋಜನೆಯಲ್ಲಿ ಇನ್ನೂ ಹೆಚ್ಚಲಿದೆ. ಇದರಂತೆ ವೆಚ್ಚವನ್ನು ತೂಗಲು, ರಾಸಾಯನಿಕಗಳು, ಆಹಾರ, ರಫ್ತುಗಳು ಮುಂತಾದಕ್ಕೆ ನೀಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಲು ಸಲಹೆಮಾಡಲಾಗಿದೆ. ಇದರಿಂದ ಲಕ್ಷಾಂತರ ಮಧ್ಯಮ ರೈತರಿಗೆ ಅನ್ಯಾಯವಾಗುತ್ತದೆ. ಆಹಾರ ಸಬ್ಸಿಡಿ ರದ್ದು ಮಾಡಿದರೆ ಬೆಲೆ ವಿಪರೀತ ಏರಿ,

ಕಾರ್ಮಿಕವರ್ಗವನ್ನು ಬಿಟ್ಟು ಮಿಕ್ಕ ಜನತೆಯ ಪ್ರತಿಯೊಂದು ವರ್ಗವನ್ನೂ ತೃಪ್ತಿಗೊಳಿಸುವ ಮಾತನಾಡುತ್ತಾರೆ. ಲಕ್ಷಾಂತರ ಕಾರ್ಮಿಕರಿಗೆ ತುಟ್ಟಿಭತ್ಯ ಸಿಗುತ್ತಿಲ್ಲ. ಸಾವಿರಾರು ಕೆಲಸಗಾರರು ಜೀತದಾಳುಗಳ ತರಹ ಕಾಂಟ್ರಾಕ್ಟ್ ದುಡಿಮೆಯಲ್ಲಿದ್ದಾರೆ. ಹೊಟ್ಟೆಗೆ ಸಾಲದ ವೇತನದಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೆ. ಆದರೆ ಇವರ ಸ್ಥಿತಿಗತಿಗಳು ಮತ್ತು ಬೇಡಿಕೆಗಳ ಬಗ್ಗೆ ಯೋಜನೆಯಲ್ಲಿ ಮಾತೇ ಇಲ್ಲ.

ಕಾರ್ಮಿಕವರ್ಗ ತನ್ನ ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಹೋರಾಡುತ್ತದೆ–ಇದನ್ನು ತಡೆಯಬೇಕು ಎಂಬುದು ಯೋಜನಾಕಾರರ ಮನಸ್ಸಿನಲ್ಲಿದೆ. ಇದಕ್ಕೆ ಕ್ರಮ ಎಂದರೆ, ಒಂದಲ್ಲ ಒಂದು ಶಾಸನದಡಿ ಮುಷ್ಕರಗಳನ್ನು ನಿಷೇಧಿಸುವುದು.

ಕಾರ್ಮಿಕರ ಭಾಗವಹಿಸುವಿಕೆಯನ್ನೂ ಹೇಳಲಾಗಿದೆ, ಸಾರ್ವಜನಿಕ ವಲಯದ ಉದ್ಯಮಗಳು ಕಾರ್ಮಿಕ ಭಾಗವಹಿಸುವಿಕೆಯನ್ನು ಒಂದಿಷ್ಟೂ ಆಹ್ವಾನಿಸಿಲ್ಲ ಎಂಬುವದನ್ನೇಕೆ ಅವರು ಹೇಳಬಾರದು? ಏಕೆಂದರೆ ಆ ಬಗ್ಗೆ ನಿಜವಾದ ಆಸಕ್ತಿ ಇಲ್ಲ. "ಉತ್ಪಾದನೆ ಹೆಚ್ಚಿಸಬೇಕು" ಎಂದು ಹೇಳುತ್ತಾರೆ. ಇದರ ಅರ್ಥ ಅವರ ಪ್ರಕಾರ, ಕಾರ್ಮಿಕರಿಗೆ ಕೆಲಸಭಾರ ಹೆಚ್ಚಿಸಿ ಅವರನ್ನು ಇನ್ನಷ್ಟು ಶೋಷಿಸುವುದು.

ವ್ಯವಸ್ಥೆಗೆ ಒತ್ತಾಯಿಸುವ ಕಾಲ ಬಂದಿದೆ.

ಹೋರಾಟ ಸುಲಭವಾಗಿದೆ:

ಇಂಥ ಹೋರಾಟಕ್ಕೆ ಕಾಲ ಸೂಕ್ತವಾಗಿದೆ. ಪ. ಬಂಗಾಳ ಮತ್ತು ಕೇರಳಗಳ ಸರ್ಕಾರ ನಿರುದ್ಯೋಗ ಪರಿಹಾರ ಯೋಜನೆಗಳನ್ನು ಆರಂಭಿಸಿವೆ. ಇದರಿಂದ ನಮ್ಮ ಹೋರಾಟ ಸುಲಭವಾಗಿದೆ, ಬೇಡಿಕೆ ಕೈಗೂಡಲು ಸಮರ್ಥವಾಗಿದೆ. ಪಂಜಾಬ್, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳೂ ಕೂಡ ಕೆಲ ಮಟ್ಟಿನ ಪರಿಹಾರ ಕೊಡಲು ಯೋಚಿಸಿವೆ. ಇವುಗಳ ಮೇಲೆ ಸಾಕಷ್ಟು ಒತ್ತಾಯವನ್ನು ಪ. ಬಂಗಾಳ ಮತ್ತು ಕೇರಳಗಳ ಕ್ರಮಗಳು ತರುತ್ತಿವೆ, ಆದರೆ ಕಾಂಗ್ರೆಸ್ (ಐ) ಸರ್ಕಾರಗಳು ಘೋಷಿಸುವ ಯೋಜನೆಗಳು ಅಗತ್ಯದಲ್ಲಿರುವವರಿಗೆ ಮುಟ್ಟದೆ ಅದರ ಬಹುಭಾಗವನ್ನು ವಿತರಣೆಗಾರರೇ ನುಂಗಿಹಾಕುತ್ತಾರೆ. ಆದರೆ ಪ. ಬಂಗಾಳ ಮತ್ತು ಕೇರಳಗಳ ಕ್ರಮಗಳು ನಿರುದ್ಯೋಗಿಗಳ ಪರವಾಗಿ ನಾವು ಹೋರಾಡಲು ಸಹಾಯಮಾಡಿವೆ.

ಹಕ್ಕುಗಳ ದಮನ :

ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಮತ್ತೆ ತರಲು ಸರ್ಕಾರ ಯೋಚಿಸುತ್ತಿದೆ. ಈ ಮಸೂದೆ ಕಾರ್ಮಿಕರ ಎಲ್ಲ ಟ್ರೇಡ್‌ಯೂನಿ

ಯನ್ ಹಕ್ಕುಗಳನ್ನು ದಮನ ಮಾಡಲು ಉದ್ದೇಶಿಸಿದೆ. ಇದರ ಜೊತೆಗೆ ಎಲ್ಲ ಮುಷ್ಕರಗಳನ್ನು ನಿಷೇಧಿಸುವ ಮಸೂದೆಯನ್ನು ತರುವ ಯತ್ನ ಇದೆ.

ಕೈಗಾರಿಕಾ ಬಿಕ್ಕಟ್ಟನ್ನು ಪರಿಹರಿಸಲು ನಾಲ್ಕು ಬಗೆಯ ಸ್ಥಿತಿಗತಿಗಳು ಇರಬೇಕು. ಮೊದಲನೆಯದಾಗಿ, ತೃಪ್ತಿಕರ ವೇತನ ಒಪ್ಪಂದಗಳು ಮತ್ತು ಒಪ್ಪಿತ ಉತ್ಪಾದನಾ ಕ್ರಮಗಳು ಇರಬೇಕು. ಇವು ಕಾರ್ಮಿಕರ ಪ್ರತಿನಿಧಿಗಳು ಮತ್ತು ಆಡಳಿತ ವರ್ಗದ ನಡುವೆ ಒಪ್ಪಿತವಾಗಿರಬೇಕು. ಎರಡನೆಯದಾಗಿ ಈ ಮಾತುಕತೆಗಳನ್ನು ನಡೆಸುವ ಸಂಘಗಳಿಗೆ ಕಾರ್ಮಿಕರ ಸಾಮೂಹಿಕ ಬೆಂಬಲ ಇರಬೇಕು, ಮೂರನೆಯದಾಗಿ ಎಲ್ಲ ಒಪ್ಪಂದಗಳನ್ನೂ ಕಾರ್ಮಿಕ ಸಮೂಹ ಅಂಗೀಕರಿಸಿರಬೇಕು. ನಾಲ್ಕನೆಯದು, ಸಮಾನತೆಯ ಮಟ್ಟದಲ್ಲಿ ಕೈಗಾರಿಕೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಇರಬೇಕು. ಭಾಗವಹಿಸುವಿಕೆಯಿಂದ ಜವಾಬ್ದಾರಿ ಹುಟ್ಟಿ ಬಿಕ್ಕಟ್ಟು ಸಡಿಲವಾಗುತ್ತದೆ ಮತ್ತು ದುಡಿಮೆ ದಿನಗಳ ನಷ್ಟ ಕಡಿಮೆಯಾಗುತ್ತವೆ.

ಇದರ ಆಧಾರದ ಮೇಲೆ ಯಾವುದಾದರೂ ಮಸೂದೆ ಬಂದರೆ, ಟ್ರೇಡ್‌ಯೂನಿಯನ್ ಚಳುವಳಿ ಅದನ್ನು ಸ್ವಾಗತಿಸುತ್ತದೆ. ಆದರೆ ಮಸೂದೆ ಯೋಚಿಸುವ ತಿದ್ದುಪಡಿಗಳೇ ಬೇರೆ. ಶ್ರೇಷ್ಠ ನ್ಯಾಯಾಲಯ ವಿವರಿಸಿದ ಹಾಗೆ, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು, ವೃತ್ತಿಗಳು, ಕ್ಲಬ್‌ಗಳು ಮತ್ತು ಸಹಕಾರ ಸಂಘಗಳನ್ನೂ ಕೈಗಾರಿಕಾ ವ್ಯಾಪ್ತಿಗೆ ಸೇರಿಸಲು ಈ ವರ್ಗಗಳು ಒತ್ತಾಯಿಸುತ್ತಿವೆ. ಆದರೆ ತಿದ್ದುಪಡಿಯು ಈ ವರ್ಗಗಳನ್ನು ಕಾರ್ಮಿಕವರ್ಗದಿಂದ ಬೇರೆ ಇಡಲು ಯೋಚಿಸುತ್ತಿದೆ

ಆದರೆ ಎಲ್ಲ ವರ್ಗಗಳಿಗೇ ಒಂದೇ ಕಾನೂನು ಇರಬೇಕು. ಅದರಲ್ಲಿ, ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಹೋರಾಟ ನಡೆಸಿದರೆ ಶಿಕ್ಷೆ ವಿಧಿಸುವ ಕ್ರಮ ಇರಬಾರದು.

ಘರ್ಷಣೆಯ ಕಾರಣ :

ಟ್ರೇಡ್‌ಯೂನಿಯನ್‌ಗಳ ಕಾರ್ಯನಿರ್ವಹಣೆಯಲ್ಲೂ ಮಧ್ಯಪ್ರವೇಶಿಸಲು ಅಧಿಕಾರ ನೀಡುವ ಹೊಸ ಯೋಚನೆಗಳನ್ನು ಮಾಡಲಾಗುತ್ತಿದೆ. ಕಾರ್ಮಿಕ ಸಂಘದ ಒಳಗೆ ಮತ್ತು ಬೇರೆಬೇರೆ ಕಾರ್ಮಿಕ ಸಂಘಗಳ ನಡುವೆ ಇರುವ ವಿವಾದವನ್ನು ಸಂಘ ಅಥವಾ ಸರ್ಕಾರ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸುವ ಅವಕಾಶವನ್ನು ನೀಡಲು ಆಲೋಚಿಸಲಾಗುತ್ತಿದೆ ಆದರೆ ಇದು ಕಾರ್ಮಿಕ ಸಂಘಗಳ ನಡುವಿನ ವಿವಾದ ಪರಿಹರಿಸುವ ನೆಪದಲ್ಲಿ ಹೋರಾಡುತ್ತಿರುವ ಕಾರ್ಮಿಕ ಸಂಘಗಳ ಮೇಲೆ ಆಕ್ರಮಣ ಮಾಡುವ ಉಪಾಯ ಇದು. ಇಂಥ ಕಾರಣಗಳ ಮೇಲಿರುವ ಮಸೂದೆಗಳು ಕೈಗಾರಿಕಾ ಶಾಂತಿಯನ್ನು ಕದಡುತ್ತವೆ.

ಕೈಗಾರಿಕಾ ಘರ್ಷಣೆಯನ್ನು ಕಡಿಮೆ ಮಾಡುವ ಆಸೆ ಇದ್ದರೆ, ಮಾಲೀಕರು, ಕಾರ್ಮಿಕರನ್ನು ಬೇಕಾದಾಗ ಸೇರಿಸಿಕೊಂಡು ಬೇಡವಾದಾಗ ಮನೆಗೆ ಕಳಿಸುವ ಅಧಿಕಾರವನ್ನು ನಿರ್ಮೂಲ ಮಾಡಬೇಕು. ಸಮಾನತೆಯ ಆಧಾರದ ಮೇಲೆ ಕಾರ್ಮಿಕರ ಭಾಗವಹಿಸುವಿಕೆ ಇದ್ದರೆ, ಘರ್ಷಣೆಯ ಈ ಕಾರಣ ಸಂಪೂರ್ಣವಾಗಿ ಇಲ್ಲವಾಗುತ್ತದೆ.

ಅನಗತ್ಯ ಮಧ್ಯಪ್ರವೇಶ :

ಕಾರ್ಮಿಕಸಂಘಗಳ ರಿಜಿಸ್ಟ್ರೇಷನ್‌ಗೆ ಕನಿಷ್ಠ ಸದಸ್ಯತ್ವದ ಮಿತಿಯನ್ನು ಹೇರುವ ಆಲೋಚನೆ ಕೂಡ ಸಂಘಗಳ ಕಾರ್ಯನಿರ್ವಹಣೆಯಲ್ಲಿ ಅನಗತ್ಯ ಮಧ್ಯಪ್ರವೇಶ.

ಕಾರ್ಮಿಕ ಪ್ರತಿನಿಧಿಗಳನ್ನು ರಹಸ್ಯ ಮತದಾನದ ಮೂಲಕ ಚುನಾಯಿಸುವುದನ್ನು ಸಿ.ಐ.ಟಿ.ಯು ಸ್ವಾಗತಿಸುತ್ತದೆ ಹಾಗೇ ಟ್ರೇಡ್‌ಯೂನಿಯನ್‌ಗಳ ರಿಜಿಸ್ಟ್ರೇಷನ್ ಕಾಯಿದೆಯು ಗ್ರಾಮೀಣ ಮತ್ತು ಕೃಷಿಕಾರ್ಮಿಕರ ಸಂಘಗಳಿಗೂ ಅನ್ವಯವಾಗುವುದಕ್ಕೂ ನಮ್ಮ ಬೆಂಬಲವಿದೆ. ಆದರೆ ಸಂಘದ ಪದಾಧಿಕಾರದಲ್ಲಿ ಹೊರಗಿನವರ ಮಿತಿಗಳನ್ನು ಕಡಿಮೆಮಾಡುವ ನಿರ್ಧಾರವನ್ನು ನಾವು ವಿರೋಧಿಸುತ್ತೇವೆ.

ವಾಮರಂಗ ಸರ್ಕಾರಗಳು:

ಮಾಲೀಕರು ಇ. ಎಸ್. ಐ, ಮತ್ತು ಭವಿಷ್ಯ ನಿಧಿಗೆ ತಮ್ಮ ಪಾಲನ್ನು ಕೊಡದೆ ಕಾರ್ಮಿಕರ ಹಣದ ಪಾಲನ್ನೂ ಅಪಹರಿಸುತ್ತಿದ್ದಾರೆ. ಇವರ ಬಾಕಿ ಕೋಟಿಗಟ್ಟಲೆ ಇದೆ. ಆದರೆ ಇದನ್ನು ವಸೂಲಿಮಾಡಲು ಉಗ್ರಕ್ರಮ ಕೈಕೊಳ್ಳದೆ ಕೇವಲ ವಿಶೇಷ ವಸೂಲಿ ಸೆಲ್ ಮಾಡುವ ಸಲಹೆ ಇದೆ ಕಾರ್ಮಿಕ ನಾಯಕರಿಗೆ ಶಿಕ್ಷೆವಿಧಿಸಲು ಕಾಂಗ್ರೆಸ್ ಸರ್ಕಾರಗಳು ಸ್ಥಾನಬದ್ಧತೆ, ಅಗತ್ಯಸೇವಾ ಮಸೂದೆ ಇವುಗಳನ್ನು ಉಪಯೋಗಿಸುತ್ತಿವೆ. ಆದರೆ ಪ ಬಂಗಾಳ ಮತ್ತು ಕೇರಳದಲ್ಲಿ ಹಾಗಿಲ್ಲ

ಕಾರ್ಮಿಕರ ಹಕ್ಕುಗಳನ್ನು ವಾಮರಂಗ ಸರ್ಕಾರ ದಮನಮಾಡುವುದರ ಬದಲು ಕಾಪಾಡುತ್ತಿವೆ. ಮುಷ್ಕರದ ಹಕ್ಕು, ಸಂಘಟನೆಯ ಹಕ್ಕನ್ನು ಪ. ಬಂಗಾಳದಲ್ಲಿ ಕಾಪಾಡಲಾಗಿದೆ. ಸರ್ಕಾರಿ ಉದ್ಯೋಗಿಗಳಿಗೂ ಮುಷ್ಕರದ ಹಕ್ಕನ್ನು ನೀಡಲಾಗಿದೆ. ಜನತೆಯ ಮುಂದೆ ಪ. ಬಂಗಾಳ, ಕೇರಳ, ತ್ರಿಪುರಗಳ ವಾಮರಂಗ ಸರ್ಕಾರಗಳು ಪರ್ಯಾಯ ಪ್ರಗತಿಪರ ನೀತಿಗಳನ್ನು ಇಟ್ಟಿವೆ. ಇವುಗಳನ್ನು ಕಾಪಾಡಲು ಸಿ.ಐ.ಟಿ.ಯು. ಪಣತೊಟ್ಟಿದೆ.

ದುಡಿಯುವ ಮಹಿಳೆಯರ ಸಮಸ್ಯೆಗಳು :

ವೇತನ, ಬಡ್ತಿ, ನೇಮಕಾತಿಗಳಲ್ಲಿ ಮಹಿಳೆಯರ ಬಗ್ಗೆ ಅಲಕ್ಷ್ಯ, ತೋರುತಿರುವುದನ್ನು ಪ್ರತಿಭಟಿಸಲು ಹೋರಾಟ ರೂಪಿಸಲು ಸಿ ಐ ಟಿ ಯು ಪ್ರಯತ್ನಿಸುತ್ತಿದೆ. ಮಹಿಳೆಯರನ್ನು ಸುಮ್ಮನೆ ಕೆಲಸದಿಂದ ತೆಗೆಯಲಾಗುತ್ತಿದೆ. ಇದರ ವಿರುದ್ಧ ಸಂಘಟನೆ ರೂಪಿಸಲು ಸಿ.ಐ.ಟಿ.ಯು. ನೇತೃತ್ವದ ದುಡಿಯುವ ಮಹಿಳೆಯರ ಸಂಘರ್ಷ ಸಮಿತಿ ಪ್ರಯತ್ನಿಸುತ್ತಿದೆ.

ಟ್ರೇಡ್ ಯೂನಿಯನ್‌ನಲ್ಲಿ ಮಹಿಳೆಯರ ಪಾತ್ರ ಹೆಚ್ಚಿಸುವುದು ಸದ್ಯದ ಕಾಳಜಿಯಾಗಿದೆ

ಟ್ರೇಡ್ ಯೂನಿಯನ್ ಐಕ್ಯತೆ :

ಜನತೆ ಮತ್ತು ಕಾರ್ಮಿಕವರ್ಗದ ಮೇಲಿನ ಆಕ್ರಮಣ ತಡೆಯಲು ಟ್ರೇಡ್ ಯೂನಿಯನ್ ಐಕ್ಯತೆ ಬೆಳೆಯಬೇಕಾಗಿದೆ. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ಫೆಡರೇಷನ್ ಸ್ಥಾಪಿಸಲು ಹಿಂದೆ ಕರೆ ಕೊಡಲಾಗಿತ್ತು. ಈ ಬಗ್ಗೆ ಮತ್ತೆ ಮನವಿ ಮಾಡುತ್ತಿದ್ದೇನೆ, ಸಂಘಟಿತ ಶಕ್ತಿಯು ಅಧಿಕಾರಿಗಳ ನೀತಿಗಳ ಮೇಲೆ ಖಂಡಿತ ಪ್ರಭಾವ ಬೀರುತ್ತದೆ.

ದೇಶದ ಆರ್ಥಿಕ ನೀತಿಗಳು ಮತ್ತು ಇತರ ನೀತಿ ಅಂಶಗಳನ್ನು ಸಂಘಟಿತ ಕಾರ್ಮಿಕ ಚಳುವಳಿ ಕೈಗೆತ್ತಿಕೊಳ್ಳಬೇಕು ಇಡೀ ಜನತೆಯ ಪರವಾಗಿ ಟ್ರೇಡ್‌ಯೂನಿಯನ್ ಚಳುವಳಿ ಮಾತನಾಡಬೇಕು.

ಸರ್ವಾಧಿಕಾರವನ್ನು ವಿರೋಧಿಸುವುದರಲ್ಲೂ ಈ ಐಕ್ಯತೆ ಪ್ರಮುಖ ಪಾತ್ರ ವಹಿಸುತ್ತದೆ. ಅದು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಆಧಾರಸ್ತಂಭವಾಗಬೇಕು. ಕೋಮುವಾದಿ ಶಕ್ತಿಗಳು, ಹಿಂಸೆ ಮತಾಂಧತೆ ಮುಂತಾದುವನ್ನೂ ಈ ಐಕ್ಯತೆ ವಿರೋಧಿಸಬೇಕು.

●

ಬೇಡಿಕೆಗಳಿಗಾಗಿ ಒತ್ತಾಯ

ಹಾವೇರಿಯ ರೈತಕಾರ್ಮಿಕರು ಸಭೆ ಸೇರಿ ನಗರದಲ್ಲಿ ತೀವ್ರವಾಗಿರುವ ಕಟ್ಟಿಗೆ, ಸಕ್ಕರೆಗಳ ಕೊರತೆ, ಹೋಟೆಲ್ ತಿಂಡಿಗಳ ದರಗಳನ್ನು ಹೆಚ್ಚಿಸಿರುವುದನ್ನು ಚರ್ಚಿಸಿ ತಕ್ಷಣ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿದ್ದರು. ಅಧಿಕಾರಿಗಳು ಆಶ್ವಾಸನೆ ಕೊಟ್ಟಿದ್ದರೂ ಯಾವುದೇ ಪರಿಣಾಮ ಕಂಡುಬಂದಿಲ್ಲವಾದ್ದರಿಂದ ತಕ್ಷಣ ಬೇಡಿಕೆಗಳನ್ನು ಈಡೇರಿಸಬೇಕೆಂದು, ಇಲ್ಲವಾದಲ್ಲಿ ಹೋರಾಟಕ್ಕಿಳಿಯಬೇಕಾದೀತೆಂದು ಹಾವೇರಿಯ ರೈತಕಾರ್ಮಿಕ ಮುಖಂಡ ಆರ್.ಎಸ್. ಜಾಬಿನ ಅವರು ಎಚ್ಚರಿಸಿದ್ದಾರೆ.

○

ಕೊಳ್ಳೇಗಾಲದಲ್ಲಿ ನೇಕಾರರ ಬವಣೆ

ಕೊಳ್ಳೆಗಾಲದಲ್ಲಿ ಕೆಲವು ತಿಂಗಳ ಹಿಂದೆ "ಮೈಸೂರು ಪ್ರಾಂತೀಯ ಕೈಮಗ್ಗ ನೇಕಾರರ ಸಹಕಾರ ಸಂಘ ಲಿ. ಬೆಂಗಳೂರು" ಇವರ ವತಿಯಿಂದ ಒಂದು ಉತ್ಪಾದನಾ ಶಾಖೆಯನ್ನು ಪ್ರಾರಂಭಿಸಿರುತ್ತಾರೆ. ಇದರಿಂದ ನೇಕಾರರಿಗೆ ಒಳ್ಳೆಯ ಕೆಲಸ ದೊರೆಯಬಹುದೆಂದು ಆಶಿಸಲಾಗಿತ್ತು.

ಇಲ್ಲಿಯ ಸಿಬ್ಬಂದಿಯು ಪಕ್ಷಪಾತ ಮತ್ತು ದರ್ಪದಿಂದ ಕೂಡಿದ್ದು, ನೇಕಾರರಿಗೆ ಸರಕಾರದಿಂದ ಬರುವಂತಹ ಯಾವ ವಿಧವಾದ ರಿಯಾಯತಿ, ಸೌಲಭ್ಯಗಳನ್ನು ಇದುವರೆಗೂ ತೆಗೆದುಕೊಟ್ಟಿರುವುದಿಲ್ಲ ಸ್ವತಃ ಕೆಲಸ ಮಾಡುವವರಿಗೆ ಪ್ರಾಶಸ್ತ್ಯ ಕೊಡುತ್ತಿಲ್ಲ. ಕೀವಾಂಶ ಕೂಡಿರುವಂತಹ ರೇಷ್ಮೆ ಕೊಟ್ಟು ತೊಂದರೆ ಕೊಡುತ್ತಿದೆ. ಮೇಲಧಿಕಾರಿಗಳಲ್ಲಿ ಕೇಳಿಕೊಂಡರೂ ಯಾವ ವಿಧವಾದ ಪ್ರಯೋಜನವೂ ಸಿಗಲಿಲ್ಲವಾದ್ದರಿಂದ ನೇಕಾರರು ಕಂಗಾಲಾಗಿ ದಿಕ್ಕುತೋಚದೆ ಕೆಲಸಮಾಡುವುದನ್ನು ಬಿಟ್ಟಿರುತ್ತಾರೆ.

●

ತಮಿಳುನಾಡು ಪ್ರಾಂತ ಸಿ. ಐ. ಟಿ. ಯು. ಅಧಿವೇಶನ

ದಿನಾಂಕ 18-9-80 ರಂದು ಕಾಂ. ಎ. ಬಾಲಸುಬ್ರಮಣಿಯವರು ಪ್ರಾಂತ ಸಿ. ಐ. ಟಿ. ಯು. ಅಧಿವೇಶನವನ್ನು ಉದ್ಘಾಟನೆ ಮಾಡಿದರು. ನಾಲ್ಕುದಿನ ಪ್ರತಿನಿಧಿಗಳ ಸಭೆಯಿತ್ತು ದೇಶಾದ್ಯಂತ ತ್ವರಿತವಾಗಿ ಬೆಳೆಯುತ್ತಿರುವ ಕಾರ್ಮಿಕ ಹೋರಾಟಗಳ ಬಗ್ಗೆ ಕೂಲಂಕುಷ ಚರ್ಚೆ ಮಾಡಲಾಯಿತು. ಕಾಂ, ಕೆ. ರಮಣಿ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿ ಕಾಂ. ಉಮಾನಾಥರು ವರದಿಯನ್ನು ಸಲ್ಲಿಸಿದರು.

ದಿನಾಂಕ 21-9-1980 ರಂದು ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟ ಸಂಖ್ಯೆಯಲ್ಲಿದ್ದ ಕಾರ್ಮಿಕರ ಬೃಹತ್ ಮೆರವಣಿಗೆ, ಬಹಿರಂಗ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಸಿ. ಐ ಟಿ ಯು ಖಜಾಂಚಿ ಹಾಗೂ ಪಾರ್ಲಿಮೆಂಟ್ ಸದಸ್ಯ ಕಾಂ. ಸಮರ ಮುಖರ್ಜಿಯವರು ಮಾತನಾಡುತ್ತಾ "ಸಧ್ಯದ ದೇಶದ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಿ. ಐ ಟಿ ಯು. ವಹಿಸಬೇಕಾದ ಹೊಣೆಗಾರಿಕೆ ಬಗ್ಗೆ ಗಮನ ಸೆಳೆದರು" ಮುಂದುವರಿದು "ಹೋರಾಟದ ಮುಂಚೂಣಿಯಲ್ಲಿರುವ ಸಿ. ಐ. ಟಿ. ಯು. ಕಾರ್ಮಿಕವರ್ಗದ ಐಕ್ಯ ಹೋರಾಟಕ್ಕೆ ಗಮನಾರ್ಹ ಪಾತ್ರ ವಹಿಸಬೇಕಾಗಿದೆ" ಎಂದರು.

ತಮಿಳುನಾಡು ಸಿ. ಐ ಟಿ. ಯು. ಸಮಿತಿಗೆ ಕಾಂ. ಕೆ. ರಮಣಿ ಅಧ್ಯಕ್ಷರಾಗಿ, ಕಾಂ. ಆರ್. ಉಮಾನಾಥ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು. ಅಲ್ಲದೇ 53 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

○

ಹೋಟೆಲ್ ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯ ಖಂಡನೆ

ಬೆಂಗಳೂರು ನಗರದ ಎಚ್. ಎ ಎಲ್. ಪ್ರದೇಶದ ಬಳಿ ಇರುವ ಕೋನೇನ ಅಗ್ರಹಾರದಲ್ಲಿ ಸೆ 22 ರಂದು ಜರುಗಿದ ಸಾರ್ವಜನಿಕ ಸಭೆಯಲ್ಲಿ ಹೋಟೆಲ್ ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯವನ್ನು ಖಂಡಿಸಲಾಯಿತು.

ಕೋನೇನ ಅಗ್ರಹಾರದ ವಿಜಯಲಕ್ಷ್ಮಿ ಭವನದ ಕಾರ್ಮಿಕರ ಮೇಲೆ ಕಳ್ಳತನ ಸುಳ್ಳು ಆರೋಪ ಹೊರಿಸಿ ಪೋಲೀಸರು ಕಾರ್ಮಿಕರನ್ನು ಸ್ಟೇಶನ್ನಿನಲ್ಲಿಟ್ಟು ಚೆನ್ನಾಗಿ ಥಳಿಸಿದ್ದಾರೆಂದು ಹೇಳಲಾಗಿದೆ.

ಪೋಲೀಸರ ಈ ದೌರ್ಜನ್ಯವನ್ನು ಪ್ರತಿಭಟಿಸಿ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಕಾರ್ಮಿಕ ಮುಖಂಡರುಗಳಾದ ಕಾಂ, ಟಿ. ಎಸ್. ಅನಂತರಾವ್, ವಿ.ಜಿ.ಕೆ. ನಾಯರ್ ಮತ್ತು ಮೈಕೊ ಕಾರ್ಮಿಕ ಸಂಘದ ಮುಖಂಡ ರಾಮಯ್ಯ ಅವರು ಮಾತನಾಡಿ ಪೋಲೀಸರ ದುಷ್ಕೃತ್ಯವನ್ನು ಖಂಡಿಸಿದರು. ನ್ಯಾಯ ಬಾಹಿರವಾಗಿ ಮುಚ್ಚಿರುವ ಹೋಟೆಲ್ ಅನ್ನು ತೆರೆದು ಎಲ್ಲಾ ಕಾರ್ಮಿಕರಿಗೆ ಮತ್ತೆ ಕೆಲಸ ಕೊಡಬೇಕೆಂದು ಅವರು ಒತ್ತಾಯಿಸಿದರು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಎ. ನಾರಾಯಣಸ್ವಾಮಿ ವಹಿಸಿದ್ದರು.

ಇದು ನಿಜವಾದಲ್ಲಿ ಖಂಡನೀಯ

ದಿನಾಂಕ 9-9-80ರಂದು ಮಧುಗಿರಿಯಲ್ಲಿ "ಕುಟುಂಬ ಕಲ್ಯಾಣ"ದ ಅಂಗವಾಗಿ ನಡೆದ ಮುಖಂಡರ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಮಾತನಾಡುತ್ತಾ "ಆರೋಗ್ಯ ಇಲಾಖೆಯಲ್ಲಿ (ಜಿಲ್ಲೆಯಲ್ಲಿ) 2500 ಜನ ಮಹಿಳಾ ಕಾರ್ಯಕರ್ತರಿದ್ದಾರೆ. ಸರಿಯಾಗಿ ಕೆಲಸಮಾಡದ ಇವರುಗಳನ್ನು ಗುಂಡಿಟ್ಟು ಕೊಲ್ಲಬೇಕು" ಎಂದಿದ್ದಾರೆಂದು ವರದಿಯಾಗಿದೆ.

ನಿಜವಾದ ವಿಷಯವೇನೆಂದರೆ ತುಮಕೂರ ಜಿಲ್ಲೆಯಾದ್ಯಂತ ಇರುವ ಮಹಿಳಾ ಕಾರ್ಯಕರ್ತರ ಸಂಖ್ಯೆ 350 ಮಾತ್ರ. ಕುಟುಂಬ ಯೋಜನಾ ಕಾರ್ಯ ಕುಂಠಿತಗೊಂಡಿರುವುದಕ್ಕೆ ಕೇವಲ ಕಾರ್ಯಕರ್ತರನ್ನು ದೂಷಿಸದೆ ಈ ಕಾರ್ಯ ನಿಧಾನಗತಿಯಿಂದ ಸಾಗಲು ಮೇಲಧಿಕಾರಿಗಳೇ ಮುಖ್ಯ ಕಾರಣ ಎಂದು ಕರ್ನಾಟಕ ರಾಜ್ಯ ಆರೋಗ್ಯ ಕಾರ್ಯಕರ್ತರ ಸಂಘದ ಕಾರ್ಯದರ್ಶಿ ಹೇಳಿಕೆಯನ್ನಿತ್ತಿದ್ದಾರೆ.

●

ಪೋಲೆಂಡಿನ ಮುಷ್ಕರ ಹೋರಾಟಗಳನ್ನು ಕುರಿತು

(3ನೇ ಪುಟದಿಂದ)

ಇಲ್ಲದಂತೆ ಮಾಡಲಾಗುತ್ತಿತ್ತು ಎಂದು ಅನೇಕ ಪಕ್ಷೇತರ ಸದಸ್ಯರು ಹೇಳಿದ್ದಾರೆ.

ಮೂಲ ಯಾವುದು

ಇವೆಲ್ಲ ಮಾತುಗಳ ತಪ್ಪುಗಳ ಆಳ ಮತ್ತು ಸ್ವರೂಪವನ್ನು ಸಮರ್ಥವಾಗಿ ತಿಳಿಸದಿದ್ದರೂ, ಆಳುವ ಪಕ್ಷ ಮತ್ತು ಸರ್ಕಾರ ತಪ್ಪುಗಳ ಮಟ್ಟವನ್ನು ತೋರಿಸುತ್ತವೆ. ನೀತಿ, ಸಂವಿಧಾನಾತ್ಮಕ ಮತ್ತು ಪ್ರಜಾಸತ್ತಾತ್ಮಕ ನಿಯಮಗಳು ಇವುಗಳ ಅನುಸರಣೆಯಲ್ಲಿ ತಪ್ಪುಗಳು, ಪಕ್ಷ ಮತ್ತು ಟ್ರೇಡ್ ಯೂನಿಯನ್ ನಡುವೆ ಸರಿಯಾದ ಸಂಬಂಧ ಇಲ್ಲದಿರುವುದು, ಕಾರ್ಮಿಕ ಸಮೂಹಕ್ಕೂ ಸರ್ಕಾರ–ಪಕ್ಷಕ್ಕೂ ಸರಿಯಾದ ಸಂವಾದ ಇಲ್ಲದಿರುವುದು ಇವೆಲ್ಲ ನಡೆದಿವೆ. ಇವುಗಳ ಮೂಲ ಯಾವುದು ಮತ್ತು ಇದುವರೆಗೆ ಅವು ಹೊರಗೆ ಬರದೆ ಇದ್ದುದೇಕೆ ಎಂದು ಪ್ರಶ್ನಿಸಲಾಗಿದೆ.

ಸಮಾಜವಾದಿ ಪೋಲೆಂಡಿನ ನಾಯಕರ ತಪ್ಪುಗಳ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಾಗ, ಲೆನಿನ್ 1922ರಲ್ಲಿ ಹೇಳಿದ್ದ ಒಂದು ಮುಖ್ಯ ಹೇಳಿಕೆಯು ನಮಗೆ ಸಹಾಯ ಮಾಡಬಹುದು. "ಕಾರ್ಮಿಕ ವರ್ಗವು ರಾಜಕೀಯ ಅಧಿಕಾರ ಹೊಂದಿರುವ ದೇಶವೊಂದರ ಮುಷ್ಕರ ಹೋರಾಟಗಳನ್ನು ಕಾರ್ಮಿಕ ಪ್ರಭುತ್ವವನ್ನು ಅಧಿಕಾರಶಾಹಿ ವಿಕೃತಿಗಳಿಂದ ಸರ್ಕಾರಿ ಕಚೇರಿಗಳಲ್ಲಿ ಉಳಿದಿರುವ ಹಳೆ ಬಂಡವಾಳಶಾಹಿ ವ್ಯವಸ್ಥೆಯ ಪಳೆಯುಳಿಕೆಗಳಿಂದ ಮತ್ತು ಕಾರ್ಮಿಕ ಜನಸಮೂಹದ ರಾಜಕೀಯ ಅಪಕ್ವತೆ, ಸಾಂಸ್ಕೃತಿಕ ಹಿಂದುಳಿದಿರುವಿಕೆಗಳಿಂದ ಮಾತ್ರವೇ ವಿವರಿಸಲು ಮತ್ತು ಸಮರ್ಥಿಸಲು ಸಾಧ್ಯ ಎಂಬುದನ್ನು ಕಮ್ಯೂನಿಸ್ಟ್ ಪಕ್ಷ, ಸೋವಿಯತ್ ಸರ್ಕಾರ ಮತ್ತು ಟ್ರೇಡ್‌ಯೂನಿಯನ್‌ಗಳು ಎಂದೂ ಮರೆಯಬಾರದು ಮತ್ತು ಇದನ್ನು ಕಾರ್ಮಿಕ ಜನಸಮೂಹದಿಂದ ಮುಚ್ಚಿಡಲೂ ಬಾರದು",

ಅಧಿಕಾರಶಾಹಿ ವಿಕೃತಿಗಳು

ಅಕ್ಟೋಬರ್ ಕ್ರಾಂತಿಯಾದ ನಾಲ್ಕು ವರ್ಷಗಳ ನಂತರ ಲೆನಿನ್ ನೀಡಿದ ಈ ಹೇಳಿಕೆಯು ಪೋಲೆಂಡಿನ 30–35 ವರ್ಷಗಳ ಸಮಾಜವಾದಿ ಪುನರ್ರಚನೆಯ ನಂತರದ ಕಮ್ಯೂನಿಸ್ಟ್ ನಾಯಕರ ತಪ್ಪುಗಳನ್ನು ಸರಿಯಾಗಿ ವಿವರಿಸದಿರಬಹುದು. ಆದರೂ ಅದು ಅಧಿಕಾರಶಾಹಿ ವಿಕೃತಿಗಳು ಮತ್ತು ಪಕ್ಷ–ಸರ್ಕಾರದ ನಡುವೆ, ಕಾರ್ಮಿಕರು–ಟ್ರೇಡ್‌ಯೂನಿಯನ್ ನಡುವೆ ಸರಿಯಾದ ಸಂಬಂಧ ಇಲ್ಲದಿರುವುದನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ.

ನಮ್ಮ ಅಭಿಪ್ರಾಯದಲ್ಲಿ, ಸಮಾಜವಾದ ಮತ್ತು ಸಮತಾವಾದಗಳನ್ನು ಕಟ್ಟುವಾಗ, ಸಮಾಜವಾದಿ ಆರ್ಥಿಕತೆಯನ್ನು ನಿರ್ಮಿಸುವುದು, ಉತ್ಪಾದನೆಯಲ್ಲಿ ಸಮಾಜವಾದಿ ಸಂಬಂಧಗಳನ್ನು ಸ್ಥಾಪಿಸುವುದು ಇವು ಮುಖ್ಯ ಕರ್ತವ್ಯಗಳಾದರೂ, ಇದಿಷ್ಟೇ ಒಂದು ಸಮಾಜವಾದಿ ದೇಶದ ಸರ್ವತೋಮುಖ ಅಭಿವೃದ್ಧಿ ಮತ್ತು ಪ್ರಗತಿಯನ್ನು ತರಲಾರದು. ಪಕ್ಷ ಮತ್ತು ಕಾರ್ಮಿಕ ವರ್ಗದ ನಡುವೆ, ಪಕ್ಷ ಮತ್ತು ಟ್ರೇಡ್ ಯೂನಿಯನ್‌ಗಳ ನಡುವೆ, ಕಾರ್ಮಿಕ ವರ್ಗ ಮತ್ತು ಅದರ ಪಕ್ಷ, ಸರ್ಕಾರಗಳನ್ನು ನಡುವೆ ಸರಿಯಾದ ಸಂಬಂಧಗಳ ಸ್ಥಾಪನೆ, ಕಾರ್ಮಿಕ ವರ್ಗಕ್ಕೆ ಸರಿಯಾದ ಸೈದ್ಧಾಂತಿಕ, ತಾತ್ವಿಕ ಶಿಕ್ಷಣ, ಮತ್ತು ಪುನರ್‌ಶಿಕ್ಷಣ ಇವೆಲ್ಲವೂ ಯಾವುದೇ ದೇಶದಲ್ಲಿ ಒಂದು ಸಮಾಜವಾದಿ ವ್ಯವಸ್ಥೆಯನ್ನು ಕಟ್ಟಬೇಕಾದರೆ ತೀರ ಅಗತ್ಯವಾದವುಗಳು.

ಎಚ್ಚರಿಕೆ ಅಗತ್ಯ

ಪೋಲೆಂಡಿನ ಮುಷ್ಕರವು ಜಗತ್ತಿನ ಸಾಮ್ರಾಜ್ಯಶಾಹಿ ವಲಯಗಳಲ್ಲಿ ವಿಪರೀತ ಆಸಕ್ತಿಯನ್ನು ಎಬ್ಬಿಸಿದೆ. ಅನೇಕ ಸಾಮಾಜಿಕ-ಪ್ರಜಾಪ್ರಭುತ್ವವಾದಿ ಟ್ರೇಡ್‌ಯೂನಿಯನ್‌ಗಳು ದೊಡ್ಡ ಭರವಸೆಗಳು ಮತ್ತು ಸಹಾಯಗಳನ್ನು ನೀಡಲು ಮುಂದೆ ಬಂದಿರುವುದಲ್ಲದೆ, ಅಮೆರಿಕದ ಅಧಿಕಾರಿಗಳು ಸೋವಿಯತ್ ಮಧ್ಯಪ್ರವೇಶದ ಬಗ್ಗೆ ಎಚ್ಚರಿಸಿ, ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದಾರೆ. ಇವಲ್ಲದೆ ಸಿ.ಐ.ಎ. ಜಾಲದ ಬಗ್ಗೆ ಸಂಶಯಗಳೂ ಏಳುತ್ತವೆ. ಈ ಬಗ್ಗೆ ಪೋಲೆಂಡಿನ ಪಕ್ಷ ಮತ್ತು ಸರ್ಕಾರ ಎಚ್ಚರಿಕೆಯಿಂದಿರಬೇಕು.

ಪೋಲೆಂಡಿನ ಜನತೆ ಮತ್ತು ರೈತ ವರ್ಗದ ಮೇಲೆ ಕ್ಯಾಥೋಲಿಕ್ ಚರ್ಚಿನ ಹಿಡಿತ ಇನ್ನೂ ಇದೆ. ಚರ್ಚ್ ನಾಯಕರು ಮುಷ್ಕರದ ಬಗ್ಗೆ ಮಾತನಾಡಿರುವುದೂ ಗುಮಾನಿ ತರಿಸುವಂತಿದೆ. ಇಂಥದನ್ನು ಪೋಲೆಂಡಿನ ಕಮ್ಯೂನಿಸ್ಟರು ಹೇಗೆ ಎದುರಿಸಿ ನಿವಾರಿಸುವರೋ ನಮಗೆ ಗೊತ್ತಿಲ್ಲ. ಧಾರ್ಮಿಕ ನಂಬಿಕೆಯನ್ನು ಸಮಾಜವಾದಿ ಸರ್ಕಾರ ಸಹಿಸುವುದು ಬೇರೆ, ಆದರೆ ಧಾರ್ಮಿಕ ಪ್ರಚಾರಗಳನ್ನು ಸಮಾಜವಾದಕ್ಕೆ ವಿರುದ್ಧವಾಗಿ ಹರಡಲು ಉದಾರಾವಕಾಶ ಮಾಡಿಕೊಡುವುದು ಬೇರೆ. "ಚರ್ಚು ಮತ್ತು ಸರ್ಕಾರ"ದ ಸಹಕಾರದ ಬಗ್ಗೆಯೂ ಇತ್ತೀಚೆಗೆ ಘೋಷಣೆ ಹೆಚ್ಚುತ್ತಿದೆ.

ಇದರಂತೆ ವಿಮೋಚನೆಯ 35 ವರ್ಷಗಳ ನಂತರವೂ ಶೇ. 70ರಷ್ಟು ರೈತರಲ್ಲಿ ಖಾಸಗಿ ಒಡೆತನ ಇದೆ. ಈ ವರದಿ ನಿಜವಾದರೆ, ಭಾರಿ ಪ್ರಮಾಣದ ಯಾಂತ್ರೀಕೃತ ಕೃಷಿ ಬಗ್ಗೆ ಅವರು ಹೆಚ್ಚು ಶೀಘ್ರವಾಗಿ ಯೋಚಿಸಬೇಕು.

ಮುಷ್ಕರದ ಅನೇಕ ಬೇಡಿಕೆಗಳು ಅಸಮರ್ಥನೀಯ ಎಂದು ನಮಗನ್ನಿಸಿದೆ. ಬೆಲೆಏರಿಕೆ ಬಗ್ಗೆ ಅಸಮಾಧಾನ ಮುಂತಾದುವು ಅವರ ಘೋಷಣೆಗಳನ್ನು ಸಮರ್ಥಿಸುತ್ತಿಲ್ಲ.

ಇದೆಲ್ಲದರ ಬಗ್ಗೆ ಪೋಲೆಂಡ್‌ನ ಕಮ್ಯೂನಿಸ್ಟರು ಗಂಭೀರ ಅಧ್ಯಯನ ನಡೆಸಿ, ನಿವಾರಣೆ ಕೈಗೊಳ್ಳಬೇಕಾಗಿದೆ.

●

ಅಸ್ಸಾಂ ಪ್ರತಿಗಾಮಿ ಚಳುವಳಿ ವಿರೋಧಿಸಿ ಮೆರವಣಿಗೆ ಮತ್ತು ಸಭೆ

ಅಸ್ಸಾಂ ಪ್ರತಿಗಾಮಿ ಚಳುವಳಿಯನ್ನು ಪ್ರತಿಭಟಿಸಿ 18-9-1980ರಂದು ದ. ಕ. ಜಿಲ್ಲೆಯ ಕುಂದಾಪುರದಲ್ಲಿ ವಿದ್ಯಾರ್ಥಿ, ಯುವಜನರ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಮತ್ತು ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ. ವೈ. ಎಫ್.) ನೇತೃತ್ವದಲ್ಲಿ ನಡೆಸಲ್ಪಟ್ಟ ಮೆರವಣಿಗೆಯಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿ, ಯುವಜನರು ಭಾಗವಹಿಸಿದ್ದರು. "ಅಸ್ಸಾಂ ಪ್ರತಿಗಾಮಿ ಚಳವಳಿಗೆ ಧಿಕ್ಕಾರ" "ಭಾರತದ ಐಕ್ಯತೆ ಚಿರಾಯುವಾಗಲಿ" "ಬೆಲೆ ಏರಿಕೆಯನ್ನು ತಡೆಗಟ್ಟಿರಿ" "ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ" "ಜಾತಿವಾದಿಗಳಿಗೆ ಧಿಕ್ಕಾರ" ಇವೇ ಮೊದಲಾದ ಘೋಷಣೆಗಳನ್ನು ಕೂಗುತ್ತಾ ಸಾಗಿದ ಮೆರವಣಿಗೆಯನ್ನು ಪೇಟೆಯ ಇಕ್ಕಡೆಗಳಲ್ಲೂ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನ ಕುತೂಹಲದಿಂದ ವೀಕ್ಷಿಸಿದರು. ಕುಂದಾಪುರದಲ್ಲಿ ವಿದ್ಯಾರ್ಥಿ, ಯುವಜನರು ಎಡ ಸಂಘಟನೆಯ ನೇತೃತ್ವದಲ್ಲಿ ಬೀದಿಗಿಳಿದುದು ಬಹುಪಾಲು ಜನತೆಯ ನಿರೀಕ್ಷೆಯನ್ನು ಮೀರಿಸಿ–ಅವರಿಗೆ ಆಶ್ಚರ್ಯವನ್ನುಂಟು ಮಾಡಿತು.

ಮೆರವಣಿಗೆ ಕುಂದಾಪುರ ಪೇಟೆಯ ಮುಖ್ಯ ರಸ್ತೆಗಳಲ್ಲಿ ಸಾಗಿ ಕೊನೆಗೆ ಶಾಸ್ತ್ರಿ ಸರ್ಕಲ್ ಬಳಿ ಸಾರ್ವಜನಿಕ ಸಭೆ ನಡೆಸಲಾಯಿತು. ವಿದ್ಯಾರ್ಥಿ ಯುವಜನರು ಮತ್ತು ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಸಭೆಯಲ್ಲಿ ಹಾಜರಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಉಡುಪಿ ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆಯ ಸಂಚಾಲಕರಾದ ಕಾಂ. ಪಿ. ವಿಶ್ವನಾಥ ರೈ, ಅಸ್ಸಾಂನಲ್ಲಿ ಕಳೆದ ಕೆಲವಾರು ತಿಂಗಳುಗಳಿಂದ ನಡೆಯುತ್ತಿರುವುದು ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಮಾರಕವಾದ ಪ್ರತ್ಯೇಕತಾವಾದಿ ಚಳವಳಿ ವಿದೇಶಿಯರನ್ನು ಹೊರಗಟ್ಟುವ ನೆಪದಲ್ಲಿ ಅಲ್ಲಿ ಭಾಷಾ ಮತ್ತು ಮತೀಯ ಅಲ್ಪ ಸಂಖ್ಯಾತರು ಸೇರಿದಂತೆ ಎಡ ಹಾಗೂ ಪ್ರಜಾಪ್ರಭುತ್ವವಾದಿ ಸಂಘಟನೆಗಳ ಮೇಲೆ ದಾಳಿ ದಬ್ಬಾಳಿಕೆ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ಸಾರ್ವಜನಿಕರಿಗೆ ವಿವರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮಲೆನಾಡು ವಲಯ ಡಿ.ವೈ.ಎಫ್. ಸಂಚಾಲಕರಾದ ಕಾಂ. ಆನಂದ ಭಂಡಾರಿಯವರು–ಅಮೇರಿಕಾದ ಸಿ.ಐ.ಎ. ಏಜಂಟರು ಅಸ್ಸಾಂ ಪ್ರತಿಗಾಮಿ ಚಳವಳಿಗೆ ಬೆಂಬಲಿಗರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಿ ಕೇಂದ್ರ ಸರಕಾರ ಈ ಚಳವಳಿಯ ಬಗ್ಗೆ ಉದಾಸೀನ ಭಾವನೆ ತಳೆದಿರುವುದನ್ನು ಖಂಡಿಸಿದರು.

ಸಭೆಯಲ್ಲಿ ಸ್ವಾಗತ ಭಾಷಣ ಮಾಡಿದ ಕುಂದಾಪುರ ತಾಲ್ಲೂಕು ಡಿ.ವೈ.ಎಫ್. ಉಪಾಧ್ಯಕ್ಷರಾದ ಕಾಂ. ಶಂಕರ ಖಾರ್ವಿಯವರು "ಅಸ್ಸಾಂ ಚಳವಳಿಯನ್ನು ಸ್ಥಳೀಯ ಸರಕಾರ ನಡೆಸುತ್ತಿದೆ. ಅಸು (AASU) ಸರಕಾರ ನಡೆಸುತ್ತಿದೆ" ಎಂದು ವಿವರಿಸಿದರು. "ವಿದ್ಯಾರ್ಥಿ ಯುವಜನ ಅಸ್ಸಾಂನಂತಹ ಪ್ರತಿಗಾಮಿ ಚಳುವಳಿಯನ್ನು ಪ್ರತಿಭಟಿಸಲು ಬೀದಿಗಿಳಿಯಬೇಕು" ರಾಜಕೀಯ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು" ಎಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಎಸ್.ಎಫ್.ಐ. ಅಧ್ಯಕ್ಷರಾದ ಕಾಂ ಶಂಭು ಬನ್ನಾಡಿ ಹೇಳಿದರು. ಎಸ್.ಎಫ್.ಐ. ಕಾರ್ಯದರ್ಶಿ ಕಾಂ. ರಘುರಾಮ ಶೆಟ್ಟಿಯವರು ಮಾತನಾಡಿ ಅಸ್ಸಾಂನಲ್ಲಿ ವಿದೇಶಿಯರನ್ನು 'ಓಡಿಸುವ ನೆಪದಲ್ಲಿ' ಜನರ ಮೇಲಾಗುತ್ತಿರುವ ದಾಳಿ, ದಬ್ಬಾಳಿಕೆಯನ್ನು ಖಂಡಿಸಿದರು. ಡಿ.ವೈ.ಎಫ್. ಮುಖಂಡರಾದ ಕಾಂ. ಕೆ. ಶಂಕರ್ ಮಾತನಾಡಿ ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಬೆಳವಣಿಗೆಯನ್ನು ತಡೆಹಿಡಿಯುವ 'ಏಕೈಕ ಉದ್ದೇಶದಿಂದ ಅಸ್ಸಾಂ ಚಳವಳಿ ನಡೆಯುತ್ತಿದೆ ಎಂದರು. ಅಪ್ಪಟ ಪ್ರತ್ಯೇಕತಾವಾದಿ ಚಳವಳಿಯಾದ ಅಸ್ಸಾಂ ಚಳವಳಿಯನ್ನು ರಾಷ್ಟ್ರೀಯ ಚಳವಳಿ ಎಂದು ಗುರುತಿಸುವ ಮೂಲಕ ಜಾತಿವಾದಿಗಳು ಜನತೆಯನ್ನು ಅಡ್ಡದಾರಿಗೆಳೆಯುತ್ತಿದ್ದಾರೆ ಎಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಡಿ.ವೈ.ಎಫ್. ಸದಸ್ಯರಾದ ಕಾಂ. ಆರ್. ಜಯಕುಮಾರ್ ಹೇಳಿದರು. ಕೊನೆಯಲ್ಲಿ ಧನ್ಯವಾದವನ್ನು ಡಿ. ವೈ. ಎಫ್. ಕಾರ್ಯದರ್ಶಿ ವಿ. ಮಹಾಬಲ ಸಲ್ಲಿಸಿದರು.

ಕುಂದಾಪುರದಲ್ಲಿ ಇದೇ ಮೊದಲ ಬಾರಿಗೆ ಅಸ್ಸಾಂ ಪ್ರತಿಗಾಮಿ ಚಳವಳಿಯನ್ನು ಪ್ರತಿಭಟಿಸುವ ಮೂಲಕ ವಿದ್ಯಾರ್ಥಿ, ಯುವಜನರು ಬೀದಿಗಿಳಿದುದು ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಯ ದೃಷ್ಟಿಯಿಂದ ಮಹತ್ವವಾದದ್ದು.



ಅಸ್ಸಾಂನ ವಿಚ್ಛಿದ್ರಕಾರಿ ಚಳುವಳಿಯನ್ನು ವಿರೋಧಿಸಿ ಕುಂದಾಪುರದಲ್ಲಿ ನಡೆದ ವಿದ್ಯಾರ್ಥಿ, ಯುವಜನರ ಮೆರವಣಿಗೆಯ ದೃಶ್ಯ

ವರದಿ : ಆರ್. ಜಯಕುಮಾರ್

ಮಂಗಳೂರಲ್ಲಿ ಡಿ.ವೈ.ಓ. ಸಭೆ

ದಿನಾಂಕ 21-9-80 ರಂದು ಮಂಗಳೂರಿನ ಅಶೋಕನಗರದಲ್ಲಿ ಡಿ ವೈ ಓ. ಆಶ್ರಯದಲ್ಲಿ ಯುವಜನತೆಯ ಸಭೆ ನಡೆಯಿತು. ಸಭೆಯ ಉದ್ದೇಶವನ್ನು ಕಾಂ. ಉಮೇಶರವರು ವಿವರಿಸಿದರು. ದೇಶದಲ್ಲಿ ಲಕ್ಷಾಂತರ ಸುಶಿಕ್ಷಿತ ನಿರುದ್ಯೋಗಿಗಳಿದ್ದು, ಉದ್ಯೋಗಾವಕಾಶಗಳಿಲ್ಲದೇ ಬಳಲುತ್ತಿರುವುದನ್ನು ಕಾಂ. ಉಮೇಶ್ ಪ್ರಸ್ತಾಪಿಸುತ್ತಾ "ದೇಶ, ಭೂಮಾಲೀಕ ಬಂಡವಾಳಶಾಹಿ ಆರ್ಥಿಕ ಧೋರಣೆಯನ್ನು ಅನುಸರಿಸುತ್ತಿರುವವರೆಗೆ ಈ ಸಮಸ್ಯೆಗೆ ಪರಿಹಾರವಿಲ್ಲ" ಎಂದರು. ಕಾಂ. ಸೀತಾರಾಮಯ್ಯ ಮಾತನಾಡುತ್ತಾ ಬಂಡವಾಳಶಾಹಿ ಪಕ್ಷದ ರಾಜಕಾರಣಿಗಳು ಯುವಜನರನ್ನು ಕಾರ್ಮಿಕವರ್ಗದ ವಿರುದ್ಧ ಉಪಯೋಗಿಸುತ್ತಿರುವುದನ್ನು ಉದಾಹರಣೆ ಸಹಿತವಾಗಿ ವಿವರಿಸುತ್ತಾ ಸಮಸ್ಯೆಗಳ ಪರಿಹಾರಕ್ಕೆ ಸಂಘಟನೆಯೇ ಮಾರ್ಗ ಎಂದು ಸಂಘಟಿತರಾಗಲು ಕರೆಕೊಟ್ಟರು.

ಡಿವಿಜನ್‌ಗೆ ರಚಿಸಲಾದ ಡಿ. ವೈ. ಓ. ಘಟಕಕ್ಕೆ ಕಾಂ. ಉಮೇಶರನ್ನು ಕಾರ್ಯದರ್ಶಿಯನ್ನಾಗಿ, ಕಾಂ. ಮಾಧವನ್‌ರನ್ನು ಜೊತೆಕಾರ್ಯದರ್ಶಿಯಾಗಿ ಚುನಾಯಿಸಲಾಯಿತು.

ಪತ್ರಿಕೆಗಳ ಮೇಲಿನ ಹಲ್ಲೆಯ ಖಂಡನೆ

ದಿನಾಂಕ 22-9-80ರಂದು ಕಾಂಗ್ರೆಸ್ ಗೂಂಡಾಗಳು ಪತ್ರಿಕಾ ಕಾರ್ಯಾಲಯಗಳ ಮೇಲೆ ದಾಳಿಮಾಡಿರುವುದನ್ನು ಚಿಕ್ಕಮಗಳೂರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಉಗ್ರವಾಗಿ ಖಂಡಿಸಿದೆ.

ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಎ.ಕೆ. ವಿಶ್ವನಾಥ ಹೇಳಿಕೆ ಹೊರಡಿಸಿ, ಅಪಾರ ತ್ಯಾಗ ಬಲಿದಾನಗಳಿಂದ ಗಳಿಸಿದ ಪ್ರಜಾಪ್ರಭುತ್ವ ಹಕ್ಕುಗಳನ್ನು ಹಾಗು ಪತ್ರಿಕಾಸ್ವಾತಂತ್ರ್ಯವನ್ನು ಉಳಿಸಲು ಮುಂದಾಗಬೇಕೆಂದು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳಿಗೆ ಕರೆ ಕೊಟ್ಟಿದ್ದಾರೆ.

ರಾಯಚೂರಲ್ಲಿ ಎಸ್.ಎಫ್.ಐ. ಹೋರಾಟ

ರಾಯಚೂರ ನಗರದಲ್ಲಿ ಕಾಲೇಜುಗಳು ಶುರುವಾಗಿ ಸಾಕಷ್ಟು ದಿವಸಗಳಾಗಿದ್ದರೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಹಾಸ್ಟೆಲ್ ಇನ್ನೂ ಶುರುವಾಗಿಲ್ಲ ಅರ್ಜಿ ಹಾಕಿದ ಅನೇಕ ವಿದ್ಯಾರ್ಥಿಗಳು ಈ ಬಗ್ಗೆ ಸೂಕ್ತ ಗಮನ-ಹರಿಸಲು ಅಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಪ್ರಯೋಜನವಾಗಿಲ್ಲ. ಕೊನೆಯ ಪ್ರಯತ್ನವೆಂದು ಉಪವಾಸ ಸತ್ಯಾಗ್ರಹ ಶುರುಮಾಡಲಾಗಿದೆ. ಇಲ್ಲಿಯವರೆಗೆ ಯಾವದೇ ಪ್ರತಿಕ್ರಿಯೆ ಇಲ್ಲ ದಿನಾಂಕ 29-9-80ರಿಂದ ನಗರದ ಎಲ್ಲ ಕಾಲೇಜಿನ ವಿದ್ಯಾರ್ಥಿಗಳು ಎಸ್ ಎಫ್.ಐ. ನೇತೃತ್ವದಲ್ಲಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಹೋರಾಟದ ಸಿದ್ಧತೆ ನಡೆಸಿದ್ದಾರೆ.

ಚೈನಾ ಜನತೆಗೆ ಶುಭಾಶಯ

ಚೈನಾ ಜನತಾ ಗಣರಾಜ್ಯದ ಸ್ಥಾಪನೆಯ ಮೂವತ್ತೊಂದನೆಯ ವಾರ್ಷಿಕೋತ್ಸವಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ತನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

1949ರಲ್ಲಿ ಚೀನಿ ಜನತೆ, ಜಪಾನದ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ, ತನ್ನ ದೇಶದ ಪ್ರತಿಗಾಮಿಗಳ ವಿರುದ್ಧ ಮೂರು ದಶಕಗಳ ವೀರೋಚಿತ ಹೋರಾಟದ ನಂತರ ವಿಜಯವನ್ನು ಸಾಧಿಸಿತು. ಈ ಅಪ್ರತಿಮ ಹೋರಾಟದಲ್ಲಿ ಮಿಲಿಯಗಟ್ಟಲೆ ಜನತೆ ಪ್ರಾಣ ತೆತ್ತರು.

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ವಿರುದ್ಧದ ಮಹಾನ್ ವಿಜಯದ ನಂತರ ಜಗತ್ತಿನ ಚರಿತ್ರೆಯಲ್ಲಿ ಚೈನಾದ ಕ್ರಾಂತಿಯು ಅನೇಕ ದೃಷ್ಟಿಯಿಂದ ಮಹತ್ವಪೂರ್ಣದ್ದು, ಏಶಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ಮುಂತಾದ ಕಡೆ ಜಗತ್ತಿನ ವಸಾಹತುಶಾಹಿಯ ವಿರುದ್ಧದ ಹೋರಾಟಕ್ಕೆ ಚೈನಾ ಕ್ರಾಂತಿ ವಿಜಯ ಸ್ಫೂರ್ತಿಯ ಕೊಡುಗೆಯನ್ನಿತ್ತಿದೆ.

ಜಗತ್ತಿನ ಅತ್ಯಂತ ಹಿಂದುಳಿದ ಮತ್ತು ಅತ್ಯಂತ ಹೆಚ್ಚಿನ ಜನಗಳುಳ್ಳ ಚೈನಾದ, ಕ್ರಾಂತಿಯ ನಂತರದ ಆರ್ಥಿಕ ಮುನ್ನಡೆ ಗಮನಾರ್ಹವಾದದ್ದು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ತನ್ನ ಕ್ರಾಂತಿಕಾರಿ ವಂದನೆಗಳನ್ನು ಚೀನಿ ಜನತೆಗೆ ಅರ್ಪಿಸುತ್ತಾ ಭಾರತ-ಚೈನಾ ಸಂಬಂಧ ಸೌಹಾರ್ದಪೂರಿತವಾಗಲೆಂದು ಆಶಿಸುತ್ತದೆ.

ನಗರಸಭೆ ನೌಕರರ ಬೇಡಿಕೆ ದಿನಾಚರಣೆ

ಕರ್ನಾಟಕ ರಾಜ್ಯ ನಗರಸಭೆ ನೌಕರರಿಗೆ 1979 ಫೆಬ್ರುವರಿಯಿಂದ ಸಿಗಬೇಕಾದ ಬಾಕಿ ಉಳಿದ ತುಟ್ಟಿ ಭತ್ತೆ, ಡಿ ಎ. ಯ ಕಂತು, ಪ್ರತ್ಯೇಕ ನಿರ್ದೇಶನಾಲಯ ಮತ್ತಿತರ ಬೇಡಿಕೆಗಳನ್ನಿಟ್ಟು ದಿನಾಂಕ 25-9-80 ರಂದು ಬಿಜಾಪುರದಲ್ಲಿ ಪೌರಕಾರ್ಮಿಕರು ಮೆರವಣಿಗೆ ನಡೆಸಿದರು.

ತಮ್ಮ ಬೇಡಿಕೆಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗಳಲ್ಲಿ ಅರ್ಪಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರನ್ನು ಕೇಳಲಾಯಿತು. ಮೆರವಣಿಗೆಯ ನೇತೃತ್ವವನ್ನು ಮುನಿಸಿಪಲ್ ಕಾಮಗಾರ ಯೂನಿಯನ್‌ನ ಕಾರ್ಯದರ್ಶಿ ಕಾಂ. ವಿ ಎಸ್. ಸೊನ್ನದ ವಹಿಸಿದ್ದರು.

ಉದ್ಯೋಗ ವಿನಿಮಯ ಕೇಂದ್ರದ ಎದುರು ಧರಣಿ ಸತ್ಯಾಗ್ರಹ

ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯಸಮಿತಿಯ ಕರೆಯ ಮೇರೆಗೆ ಮಂಗಳೂರಿನಲ್ಲಿ ಉದ್ಯೋಗ ವಿನಿಮಯಕೇಂದ್ರದ ಎದುರು ಧರಣಿ ಸತ್ಯಾಗ್ರಹ ಹೂಡಲು ತೀರ್ಮಾನಿಸಲಾಗಿದೆ

ಕಾರಣ ಮಂಗಳೂರಿನ ವಿದ್ಯಾರ್ಥಿಗಳು ಹಾಗೂ ನಿರುದ್ಯೋಗಿ ಯುವಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಮಾಡುವಂತೆ ಮಂಗಳೂರು ತಾಲ್ಲೂಕು ಸಮಿತಿಯ ಸಂಚಾಲಕ ಕಾಂ. ಬಿ ಉಮಾನಾಥ ಕೋರಿದ್ದಾರೆ.

ಇಂಡಾಲ್ ಕಾರ್ಮಿಕರಿಗೆ ವಜಾದಲ್ಲಿ ವೇತನ

ಬೆಳಗಾವಿಯ ಇಂಡಿಯನ್ ಅಲ್ಯೂಮಿನಿಯಂ ಕಂಪೆನಿಯ ವರ್ಕರ್ಸ್ ಯೂನಿಯನ್ ಕಳೆದ ಅನೇಕ ದಿನಗಳಿಂದ ತನ್ನ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದೆ, ಕಂಪೆನಿ ತನ್ನ ಬೀಗಮುದ್ರೆಯನ್ನು ತೆರೆದ ನಂತರ ಕಾರ್ಮಿಕರು ತಮ್ಮ ಮುಷ್ಕರವನ್ನು ಮತ್ತೆ ಪ್ರಾರಂಭಿಸಿದರು. ಆಡಳಿತವರ್ಗವು ಕಾರ್ಮಿಕ ಸಚಿವರ ಸಮ್ಮುಖದಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದೆ. ಇದರ ಪ್ರಕಾರ, ಮುಷ್ಕರದಿಂದ ವಜಾ ಆದ ಕಾರ್ಮಿಕರಿಗೆ ಶೇ. 60ರಷ್ಟು ವೇತನವನ್ನು ಆಡಳಿತವರ್ಗ ಕೊಡಲೊಪ್ಪಿದೆ. ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿರುವಾಗ ವಜಾ ಆದ ಕಾರ್ಮಿಕರಿಗೆ ವೇತನ ಕೊಡಲು ಒಪ್ಪಂದವಾಗಿರುವುದು ತೀರ ಅಪರೂಪವಾದುದು. ಟ್ರಿಬ್ಯೂನಲ್‌ನ ತೀರ್ಮಾನದವರೆಗೆ ಇದು ನಡೆಯುತ್ತದೆ, ಕಾರ್ಮಿಕರು ಕಾರ್ಯಾರಂಭ ಮಾಡಿದ್ದಾರೆ. ಈಗ ಮತ್ತೆ ಸಂಧಾನಗಳು ನಡೆಯುತ್ತಿವೆ.

ಹರಿಹರದಲ್ಲಿ ಯುವಜನ ಸಂಘಟನಾ ಸಮಿತಿ ರಚನೆ

ತಾ 19-9-80ನೇ ಶುಕ್ರವಾರ ರಾಜ್ಯ ಸಮಿತಿ ಸದಸ್ಯರಾದ ಕಾಂ. ಇಕ್ಬಾಲ್ ಹುಸೇನ್‌ರವರ ಅಧ್ಯಕ್ಷತೆಯಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನಾ ಸಮಿತಿಯ ಆಶ್ರಯದಲ್ಲಿ ಸಭೆ ಸೇರಿದ್ದಿತು. ಆ ಸಭೆಗೆ ಸುಮಾರು 40 ಜನ ಯುವಕರು ಭಾಗವಹಿಸಿದ್ದರು ದೇಶದ ಬಂಡವಾಳಶಾಹೀ ಸಮಾಜದಲ್ಲಿ ಯುವಜನಾಂಗದ ಶೋಷಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಕಾಂ. ಇಕ್ಬಾಲ್ ಹುಸೇನ್‌ರವರು ವಿವರಿಸಿದರು. ಅವರು ಮುಂದುವರಿದು ಇಂತಹ ಶೋಷಣೆಯ ವಿರುದ್ಧ ಯುವಜನಾಂಗ ಸಂಘಟಿತರಾಗಿ ಹೋರಾಡಬೇಕೆಂದು ಕರೆಕೊಟ್ಟರು.

ಆ ಸಭೆಯಲ್ಲಿ ಹರಿಹರ ತಾಲ್ಲೂಕು ಮಟ್ಟದ 12 ಜನ ಸದಸ್ಯರಿರುವ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ಕಾಂ. ಭೀಮರೆಡ್ಡಿಯವರು ಸಂಚಾಲಕರಾಗಿರುತ್ತಾರೆ. ಇತರ ಸಮಿತಿಯ ಸದಸ್ಯರೆಂದರೆ ಕಾಂ. ರಘುರಾಂ, ಜಿ. ಕೆ. ಶಿವಣ್ಣರೆಡ್ಡಿ, ಕಾಂ. ಇಂಗ್ಲೇಶ್ವರ, ಕಾಂ. ವೀರಣ್ಣ, ಕಾಂ. ಮಲ್ಲೇಶಪ್ಪ, ಕಾಂ. ಜಯಣ್ಣ, ಕಾಂ. ಶ್ರೀನಿವಾಸ್, ಕಾಂ. ಕೆ. ಎಸ್. ನವರತ್ನಂ, ಕಾಂ. ಎನ್. ಮೂರ್ತಿ, ಸಯ್ಯದ್ ಮಹಬೂಬ್ ಮತ್ತು ಹನುಮಂತಪ್ಪ ಮೆಡ್ಲೇರಿ ಇವರುಗಳು.

ಎಚ್.ಎಸ್.ಸಿ.ಎಲ್. ಆಡಳಿತವರ್ಗದ ದಬ್ಬಾಳಿಕೆ

ದಿನಾಂಕ 24-9-80 ರಂದು ಕುದುರೆಮುಖದ ಎಚ್. ಎಸ್. ಸಿ. ಎಲ್. ಆಡಳಿತವರ್ಗವು 239 ಕಾರ್ಮಿಕರನ್ನು ವಿನಾಕಾರಣವಾಗಿ ರಿಟ್ರೆಂಚ್ ಮಾಡಿದ್ದಾರೆ. ಅನೇಕ ವರ್ಷಗಳ ಕಾಲ ಕೆಲಸಮಾಡಿದ ಕಾರ್ಮಿಕರ ಸರ್ವಿಸನ್ನು ಗಣನೆಗೆ ತೆಗೆದುಕೊಳ್ಳದೇ ಪೋಲೀಸರ ಬೆಂಬಲದಿಂದ ರಿಟ್ರೆಂಚ್‌ಮೆಂಟ್ ಆರ್ಡರುಗಳನ್ನು ಜಾರಿಮಾಡುತ್ತಿದ್ದಾರೆ.

ಯೂನಿಯನ್‌ನ ಸರ್ವಸದಸ್ಯರ ಸಭೆ ಸೇರಿ ಮ್ಯಾನೇಜ್‌ಮೆಂಟಿನ ದುರಾಡಳಿತವನ್ನು ಖಂಡಿಸಿ, ತಕ್ಷಣ ರಿಟ್ರೆಂಚ್‌ಮೆಂಟ್ ಆರ್ಡರುಗಳನ್ನು ವಾಪಸ್ಸು ತೆಗೆದ ಕೊಳ್ಳುವಂತೆ ಇಲ್ಲವೆ, ಈ ಕಾರ್ಮಿಕರನ್ನು ಎಚ್. ಎಸ್. ಸಿ ಎಲ್. ಸುವಾ ಯುನಿಟ್‌ಗಾದರೂ ವರ್ಗಾಯಿಸುವಂತೆ ಒತ್ತಾಯಿಸಿತು. ಕಾರ್ಮಿಕರ ಮನವಿಗೆ ಕಿವಿಗೊಡದಿರುವ ಆಡಳಿತವರ್ಗದ ವಿರುದ್ಧ ಕಾರ್ಮಿಕರು ಹೋರಾಟ ಪ್ರಾರಂಭಿಸಿದ್ದಾರೆ.

ಹೋಟೆಲ್ ಕಾರ್ಮಿಕರ ಸರ್ವಸದಸ್ಯರ ಸಭೆ

ನೂರು ದಿನಗಳಿಗಿಂತಲೂ ಹೆಚ್ಚು ದಿನ ನಡೆದ ಗ್ರ್ಯಾಂಡ್ ನ್ಯಾಶನಲ್ ಹೋಟೆಲ್ ಕಾರ್ಮಿಕರ ವೀರೋಚಿತ ಹೋರಾಟ ಯಶಸ್ವಿಯಾಗಿ ಕೊನೆಗೊಂಡುದರ ಹಿನ್ನೆಲೆಯಲ್ಲಿ ದಿನಾಂಕ 18-9-80ರಂದು ದೇವಾಂಗ ಸಂಘದಲ್ಲಿ ಸರ್ವಸದಸ್ಯರ ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ವಿ. ಜೆ. ಕೆ. ನಾಯರ್ ಮತ್ತು ಕಾಂ. ಟಿ. ಎಸ್. ಅನಂತರಾಂ ಅವರುಗಳು ಹೋಟೆಲ್ ಕಾರ್ಮಿಕರು ನಡೆಸಿದ ಅವಿರತ ಹೋರಾಟಗಳನ್ನು ಸಭೆಗೆ ವಿವರಿಸಿದರು. "ಕಾನೂನು ಬದ್ಧ ಸೌಲಭ್ಯಗಳನ್ನು ಪಡೆಯಲು ಸಂಘಟಿತ ಹೋರಾಟವಲ್ಲದೆ ಅನ್ಯ ಮಾರ್ಗವಿಲ್ಲ" ಎಂದು ಅವರು ತಿಳಿಸಿದರು.

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘಕ್ಕೆ ಹೊಸದಾಗಿ ರಚಿಸಲಾದ ಸಮಿತಿಗೆ ಕಾಂ. ಟಿ. ಎಸ್. ಅನಂತರಾಂ ಅಧ್ಯಕ್ಷರಾಗಿ, ಕಾಂ. ಇ.ಕೆ. ಎನ್. ರಾಜನ್ ಪ್ರಧಾನ ಕಾರ್ಯದರ್ಶಿಯಾಗಿ, ಸಹಕಾರ್ಯದರ್ಶಿಯಾಗಿ ಕಾಂ. ಪಿ. ಗೋಪಿ, ಉಪಾಧ್ಯಕ್ಷರಾಗಿ ಕಾಂ. ಆಡಮ್ಸ್ ಮತ್ತು ಖಜಾಂಚಿಯಾಗಿ ಜಿ.ನಾಯುಡು ಲಾಯಿತು.

ಅಸ್ಸಾಂ ಸಮಸ್ಯೆಯಲ್ಲಿ ಅಡಕವಾಗಿರುವ ಪ್ರಶ್ನೆಗಳು

(1ನೇ ಪುಟದಿಂದ)

ವಿರೋಧ ಭಾವನೆ :

ಈ ಸಹಜವಾದ ಅತೃಪ್ತಿ ಅಸ್ಸಾಂನೊಳಗಿರುವ ಅಸ್ಸಾಮಿ ಭಾಷೆ ಮಾತನಾಡದ ಮುಖ್ಯವಾಗಿ ಬಂಗಾಲಿಗಳು ಮತ್ತು ಬುಡಕಟ್ಟು ಜನರ ಮೇಲೆ ಅಲ್ಪಸ್ವಲ್ಪ ದ್ವೇಷಭಾವನೆಯನ್ನು ಒಳಗೊಂಡಿತ್ತು. ಬುಡಕಟ್ಟು ಜನರು ಅಧಿಕವಾಗಿರುವ ಜಿಲ್ಲೆಗಳನ್ನು ಪ್ರತ್ಯೇಕಿಸಿ ಮೇಘಾಲಯ ರಾಜ್ಯ ನಿರ್ಮಾಣವಾದ ಬಳಿಕ ಅಸ್ಸಾಮಿಗಳು ಮತ್ತು ಬುಡಕಟ್ಟು ಜನರ ನಡುವಿನ ಸಂಘರ್ಷವೇನೋ ಸ್ವಲ್ಪಮಟ್ಟಿಗೆ ನಿವಾರಣೆಯಾಯಿತಾದರೂ ಅಸ್ಸಾಮಿಗಳ ಬಂಗಾಳಿ ವಿರೋಧಿ ಭಾವನೆ ತಗ್ಗಲಿಲ್ಲ. ಈಗಿನ ಚಳುವಳಿ ಪ್ರಾರಂಭವಾದಾಗ ಅದರಲ್ಲಿ ಅಸ್ಸಾಮಿ ಭಾಷೆ ಮಾತನಾಡುವ ಜನರ ರಾಷ್ಟ್ರೀಯ ಆಶಯಗಳ ಅಭಿವ್ಯಕ್ತಿಯೊಳಗೆ ಬಂಗಾಳಿ ವಿರೋಧದ ಛಾಯೆಯೂ ಸ್ಪಷ್ಟವಾಗಿ ಕಾಣಿಸಿಕೊಂಡಿರುವುದು ನಿಜ.

ವಿದೇಶೀಯರ ವಿರುದ್ಧ ಆರಂಭಗೊಂಡ ಅಸ್ಸಾಂ ಚಳುವಳಿಯ ಜೊತೆ ಸೇರಿಕೊಂಡ ಇನ್ನೊಂದು ಪ್ರಮುಖ ಆದರೆ ಅಷ್ಟೇ ಗಂಭೀರ ಅಂಶವೆಂದರೆ ಅದರ ಕೋಮುವಾದಿ ಸ್ವರೂಪ. ಪೂ ಪಾಕಿಸ್ತಾನ, ಬಂಗ್ಲಾದೇಶಗಳಿಂದ ಬಂದ ವಲಸೆಗಾರರಲ್ಲಿ ಬಂಗಾಳಿ ಮಾತನಾಡುವ ಮುಸಲ್ಮಾನರಲ್ಲದೆ ಹಿಂದೂಗಳೂ ಇದ್ದಾರೆ. ಚಳುವಳಿಯನ್ನು ಸಂಘಟಿಸಿದವರಿಗೆ ವಿದೇಶೀಯರನ್ನು ಹೊರಗಟ್ಟುವುದರಲ್ಲಿ ಮಾತ್ರ ಆಸಕ್ತಿಯಿರುವುದಾದರೆ ಅವರು ಈ ವಲಸೆಗಾರರ ನಡುವೆ ಹಿಂದೂ ಮತ್ತು ಮುಸ್ಲಿಂ ಎಂಬ ವ್ಯತ್ಯಾಸ ತೋರಿಸಬಾರದಿತ್ತು.

ಆದರೆ ಆರೆಸ್ಸೆಸ್‌ನ ನೇತೃತ್ವದಲ್ಲಿನ ಹಿಂದೂ ಕೋಮುವಾದಿಗಳು ಈ ನಿರಾಶ್ರಿತರ ನಡುವೆ 'ಹಿಂದೂ ನಿರಾಶ್ರಿತರು' ಮತ್ತು 'ಮುಸ್ಲಿಂ ಅಕ್ರಮ ಪ್ರವೇಶಗಾರ'ರೆಂಬ ತಾರತಮ್ಯವುಂಟು ಮಾಡಿದ್ದಾರೆ. ಮುಸ್ಲಿಮರನ್ನು ಬಂಗ್ಲಾದೇಶಕ್ಕೆ ಅಟ್ಟಬೇಕೆಂದೂ ಹಿಂದೂ ನಿರಾಶ್ರಿತರಿಗೆ ಮಾತ್ರ ದೇಶದ ಇತರ ರಾಜ್ಯಗಳಲ್ಲಿ ಪುನರ್ವಸತಿ ಕಲ್ಪಿಸಬೇಕೆಂದೂ ಆರೆಸ್ಸೆಸ್‌ನ ಮುಖವಾಣಿ ಆರ್ಗನೈಸರ್ ಮತ್ತು ಅದರ ಮುಂದಾಳು ದೇವರಸ್ ಪ್ರತಿಪಾದಿಸಿದ್ದಾರೆ.

ಪೌರತ್ವ ನಿರಾಕರಣೆ :

ಹೀಗೆ ಅಸ್ಸಾಂ ಚಳುವಳಿ ಬಂಗಾಳಿ ವಿರೋಧಿ ಮತ್ತು ಮುಸ್ಲಿಂ ವಿರೋಧಿ ಸ್ವರೂಪವನ್ನು ಪಡೆದುಕೊಂಡಿತು. ಇದರೊಂದಿಗೆ ಸ್ವಲ್ಪ ಮಟ್ಟಿಗೆ ಅಸ್ಸಾಂನಲ್ಲಿ ನೆಲೆಸಿರುವ ನೇಪಾಳಿಗಳು, ಬಿಹಾರಿಗಳು ಮತ್ತಿತರ ಭಾರತೀಯ ಪೌರರ ಬಗೆಗಿನ ವಿರೋಧವೂ ಅದನ್ನು ಸೇರಿಕೊಂಡಿತು. ಅಸ್ಸಾಮಿನ ಒಟ್ಟು ಜನಸಂಖ್ಯೆಯಲ್ಲಿ ಈ ಎಲ್ಲ ವಿಭಾಗದ ಜನರ ಪ್ರಮಾಣ ಶೇಕಡಾ 40ಕ್ಕೂ ಕಡಿಮೆಯಿಲ್ಲದಷ್ಟಿದೆ.

ರಾಷ್ಟ್ರೀಯ ಪೌರತ್ವದ ದಾಖಲೆ 1952ರ ಮತದಾರರ ಯಾದಿಗೇ ಅಂಟಿಕೊಂಡರೆ ಅದು ಅಸ್ಸಾಮಿ ಸಂಕುಚಿತ ವಾದವನ್ನೇ ಪುರಸ್ಕರಿಸಿದಂತಾಗುವುದಿಲ್ಲವೇ ಮತ್ತು ಅಪಾರ ಸಂಖ್ಯೆಯ ಜನರಿಗೆ ಭಾರತೀಯ ಪೌರತ್ವವನ್ನು ಅಲ್ಲಗಳೆಯುವಂತೆ ಮಾಡಲಾರದೇ ಎಂಬುದನ್ನೂ ವಿವೇಚಿಸಬೇಕು.

ಅಸ್ಸಾಮಿನ ಸಮಸ್ಯೆಯ ಪರಿಹಾರಕ್ಕೆ ಕಳೆದ ಜೂನ್ ತಿಂಗಳ ಮಧ್ಯಭಾಗದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಏಳು ಅಂಶಗಳ ಸೂತ್ರವೊಂದನ್ನು ಸೂಚಿಸಿದೆ. ಗಡಿಯಾಚೆಯಿಂದ ಜನ ವಲಸೆ ಬರುವುದನ್ನು ತಡೆಗಟ್ಟಲು ಕೇಂದ್ರಸರಕಾರವು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು; 1971ರ ವರ್ಷವನ್ನು ನಿರ್ಣಾಯಕ ವರ್ಷವಾಗಿ ಪರಿಗಣಿಸಿ ಮಾತುಕತೆಗಳನ್ನು ಪ್ರಾರಂಭಿಸಬೇಕು; ವಿದೇಶೀಯರನ್ನು ಪತ್ತೆಹಚ್ಚಲು ನಿಷ್ಪಕ್ಷಪಾತಿಯಾದ ವ್ಯವಸ್ಥೆಯೊಂದನ್ನು ರಚಿಸಬೇಕು ಮಾತ್ರ ಅದು ಅಲ್ಪಸಂಖ್ಯಾತರ ವಿಶ್ವಾಸವನ್ನೂ ಹೊಂದಿರಬೇಕು; ಹಾಗೂ ನಿರುದ್ಯೋಗ, ಭೂಹೀನತೆ ಮತ್ತು ದಾರಿದ್ರ್ಯದ ಸಮಸ್ಯೆಗಳನ್ನು ಬಗೆಹರಿಸಲು ಸ್ವೀಕಾರಾರ್ಹವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು. ಇವು ಸಿ. ಪಿ. ಐ. (ಎಂ) ನೀಡಿದ ಸೂತ್ರದ ಮುಖ್ಯಾಂಶಗಳು.

ಚಳುವಳಿಯ ಸೂತ್ರದಾರರು ಸೂಚಿಸಿದ ಎರಡು ದಾಖಲೆಗಳ ಜೊತೆಗೆ ವಿದೇಶೀಯರನ್ನು ಪತ್ತೆಹಚ್ಚುವ ಕಾರ್ಯದಲ್ಲಿ 1957, 1962, 1967, 1971, ಹಾಗೂ 1977ರ ಮತದಾರರಯಾದಿಗಳನ್ನೊಳಗೊಂಡು ಇದಕ್ಕೆ ಸಂಬಂಧಿಸಿದ ಇನ್ನೂ ಕೆಲವು ದಾಖಲೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಕೇಂದ್ರ ಸರಕಾರದ ಪ್ರತಿನಿಧಿಗಳು ಸೂಚಿಸಿರುವುದು ಸಂಪೂರ್ಣ ಸಮಂಜಸವೇ ಆಗಿದೆ.

(ಮುಂದುವರೆಯುವುದು)

ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಪ್ರಚಂಡ ವಿಜಯ

(1ನೇ ಪುಟದಿಂದ)

ನೇತೃತ್ವದ ಸರಕಾರದ ರಾಜೀನಾಮೆಗೆ ಒತ್ತಾಯಿಸುತ್ತಿರುವ ಸಮಯದಲ್ಲಿ, ಉರ್ದು ಮತ್ತು ಅರೇಬಿಕ್ ಭಾಷಾ ಗೊಂದಲವೆಬ್ಬಿಸಿದ ಸಮಯದಲ್ಲಿ ಈ ಚುನಾವಣೆಗಳು ಜರುಗಿವೆ. ಕಾಂಗ್ರೆ ಒಕ್ಕೂಟವು, ಆಡಳಿತ ಒಕ್ಕೂಟ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆ ಎಂದು ಆಪಾದಿಸುತ್ತಿರುವ ಸಮಯದಲ್ಲಿ ಈ ಚುನಾವಣೆ ಫಲಿತಾಂಶ ವಿರೋಧ ಪಕ್ಷಗಳ ಆಕ್ರೋಷ ಎಷ್ಟು ಪೊಳ್ಳು ಎಂದು ಸಾಬೀತುಗೊಳಿಸಿದೆ. ಕೇರಳದ ಜನತೆ ವಿರೋಧಿ ಪಕ್ಷಗಳ ಈ ಅಪವಿತ್ರ ಮೈತ್ರಿಯನ್ನು ಸಾರಾಸಗಟು ತಿರಸ್ಕರಿಸಿದೆ,

ಕೆಲವು ಕೇಂದ್ರ ಮಂತ್ರಿಗಳು ಕೇರಳದ ಆಡಳಿತ ರಂಗವನ್ನು ಅರಬ್ಬೀ ಸಮುದ್ರಕ್ಕೆ ಬೀಸಾಕಿ ಎಂದು ಕರೆ ಕೊಟ್ಟಿದ್ದರು. ಅವರೆಲ್ಲರೂ ಅದರಲ್ಲೂ ಶ್ರೀಮಾನ್ ಸಿ. ಎಂ. ಸ್ಟೀಫನ್‌ರವರು ಈ ಚುನಾವಣಾ ಫಲಿತಾಂಶವನ್ನು ಗಮನಿಸಬೇಕಾಗಿದೆ. ಬೇಜವಾಬ್ದಾರಿ ಬೆದರಿಕೆ, ಪ್ರದರ್ಶನ ಇತ್ಯಾದಿಗಳಿಂದ ಕಾಂಗ್ರೆ ದಿನದಿನಕ್ಕೆ ಜನತೆಯಿಂದ ದೂರಸರಿಯುತ್ತಿರುವುದನ್ನು ಈ ಚುನಾವಣೆ ತೋರಿಸಿಕೊಟ್ಟಿದೆ.

ತನ್ನ ನಿರ್ದಿಷ್ಟ ಧೋರಣೆ, ಪುರೋಗಾಮಿ ಕಾರ್ಯಕ್ರಮಗಳಿಂದ ಕೇರಳ ಸರಕಾರ ಭದ್ರವಾಗಿದೆ ಎಂಬುದನ್ನು ಕೇಂದ್ರ ಸರಕಾರವೂ ಗಮನಿಸಬೇಕಾಗಿದೆ.

ಎಡರಂಗ ಮತ್ತು ಎಡಪ್ರಜಾಪ್ರಭುತ್ವ ರಂಗ ಸರಕಾರಗಳಲ್ಲಿ ಕಾನೂನು ವ್ಯವಸ್ಥೆ ಕುಸಿಯುತ್ತಿದೆ ಮತ್ತು ಈ ಸರಕಾರಗಳು ಜನತೆಯಿಂದ ದೂರವಾಗುತ್ತಿವೆ ಎಂದು ಆಪಾದಿಸುತ್ತಿರುವ ಇಂದಿರಾಗಾಂಧಿಯವರಿಗೆ ಕೇರಳದ ಈ ಚುನಾವಣಾ ಫಲಿತಾಂಶ ಉತ್ತರವನ್ನಿತ್ತಿದೆ.

●

ಪತ್ರಿಕೆಗಳ ಮೇಲಿನ ಹಲ್ಲೆಯ ಖಂಡನೆ

ದಿನಾಂಕ 22-9-80 ರಂದು ಕಾಂಗ್ರೆ ಗೂಂಡಾಗಳ ಪ್ರಮುಖ ದಿನಪತ್ರಿಕೆ ಕಾರ್ಯಾಲಯಗಳ ಮೇಲಿನ ದಾಳಿಯನ್ನು ದ. ಕ. ಜಿಲ್ಲಾ ಸಿ. ಐ. ಟಿ. ಯು. ಸಮಿತಿ ಉಗ್ರವಾಗಿ ಖಂಡಿಸಿದೆ.

ಪತ್ರಿಕಾ ಸ್ವಾತಂತ್ರ್ಯದ ಮೇಲೆ ದಾಳಿ ಮಾಡಲೆತ್ನಿಸುವ ವ್ಯಕ್ತಿಗಳ ಮೇಲೆ ತಕ್ಷಣ ಕ್ರಮತೆಗೆದುಕೊಳ್ಳಬೇಕೆಂದೂ ಒತ್ತಾಯಿಸಿದೆ.

ಸಂಪಾದಕೀಯ

(1ನೇ ಪುಟದಿಂದ)

ವೆನೆಂದು ಘೋಷಿಸಿದ್ದ ಮುಖ್ಯಮಂತ್ರಿಯವರು ಒಂದಿಬ್ಬರನ್ನು ಸೇರಿಸಿಕೊಂಡು ತಾತ್ಕಾಲಿಕ ತೃಪ್ತಿಪಡೆಯಬೇಕಾದೀತೆಂದು ತೋರುತ್ತದೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಾಂತರಿಗಳು (ಅಂದರೆ ಲೋಕಸಭಾ ಚುನಾವಣಾ ಫಲಿತಾಂಶದ ಮೇಲೆ ಸೇರಿದವರು) ಎಂದೆನಿಸಿದವರನ್ನೇ ಆಧರಿಸಿಕೊಂಡಿರುವ ಮಂತ್ರಿಮಂಡಲದಲ್ಲಿ ಇವರಿಗೆ ಗಣನೀಯ ಸಂಖ್ಯೆಯಲ್ಲಿ ಸ್ಥಾನ ಕೊಟ್ಟಿಲ್ಲವಾದರೆ ಮಂತ್ರಿಮಂಡಲ ಉಳಿಯುವುದು ಕಷ್ಟವಿದೆ. ಇದೇ ರಾಯರ ಮುಂದಿರುವ ಜಟಿಲ ಸಮಸ್ಯೆ. ಮೇಲಿನಿಂದ ತನ್ನ ಅಭಿಪ್ರಾಯಕ್ಕೆ ಮಾನ್ಯತೆ ದೊರೆಯದಿರುವುದೇ ಅವರ ಗಲಿಬಿಲಿಗೆ ಕಾರಣ.

ಕಾಂಗ್ರೆಯ ಒಳಜಗಳದೊಂದಿಗೆ ರಾಜ್ಯದಲ್ಲಿನ ಜನತೆಯ ಸಮಸ್ಯೆಗಳೂ ಹೆಚ್ಚುತ್ತಿವೆ. ಸರಕಾರವಿದ್ದೂ ಇಲ್ಲದಂತಿದೆ. ಪರಿಸ್ಥಿತಿ ಹೀಗಿದ್ದರೂ, ರಾಜ್ಯದಲ್ಲಿ ಕಾಂಗ್ರೆಗೊಂದು ಸರಿಯಾದ ಬದಲಿ ಇಲ್ಲದ್ದರಿಂದ, ಇವರ ಕಾರುಭಾರು ಮುಂದೆ ಸಾಗುತ್ತಿದೆ. ಪರಿಸ್ಥಿತಿಯ ಲಾಭ ಪಡೆಯಬೇಕಾದರೆ ಈಗಾಗಲೇ ಪ್ರಾರಂಭವಾಗಿರುವ "ರಾಜ್ಯದಲ್ಲಿನ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಸೇರಿಸಿ ನಿರ್ದಿಷ್ಟ ಕಾರ್ಯಕ್ರಮಗಳ ಆಧಾರದಲ್ಲಿ ರಾಜ್ಯದಾದ್ಯಂತ ಜನಕೀಯ ಚಳುವಳಿಯನ್ನು ಬೆಳೆಸುವ ಪ್ರಯತ್ನ"ವನ್ನು ತೀವ್ರಗತಿಯಿಂದ ಮುಂದೊಯ್ಯಬೇಕಾಗಿದೆ.

○

ಎಸ್. ಎಫ್. ಐ. ರಾಜ್ಯಸಮಿತಿಯ ಸಭೆ

ದಿನಾಂಕ 7-10-80ರಂದು ಬೆಳಿಗ್ಗೆ 9ಗಂಟೆಗೆ ಬೆಂಗಳೂರಿನಲ್ಲಿ ಎಸ್.ಎಫ್.ಐ. ರಾಜ್ಯಸಮಿತಿಯ ತುರ್ತುಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ರಾಜ್ಯ ಸಮಿತಿ ಸದಸ್ಯರುಗಳಲ್ಲದೆ ಸಂಘಟನೆಯಿರುವ ಮತ್ತು ಪ್ರಾರಂಭಿಸಲು ಪ್ರಯತ್ನ ನಡೆಸುತ್ತಿರುವ ಪ್ರತಿ ತಾಲ್ಲೂಕಿನಿಂದ ಒಬ್ಬೊಬ್ಬ ಸಂಗಾತಿಯನ್ನು ವೀಕ್ಷಕರಾಗಿ ಆಹ್ವಾನಿಸಲಾಗಿದೆ.

ಡಿಸೆಂಬರ್ ಅಂತ್ಯದೊಳಗೆ ನಡೆಸಲು ಉದ್ದೇಶಿಸಿರುವ ಎಸ್.ಎಫ್.ಐ.ನ ಮೂರನೇ ರಾಜ್ಯ ಸಮ್ಮೇಳನದ ಕುರಿತು ಚರ್ಚಿಸಲಿರುವುದರಿಂದ ಈ ಸಭೆಯು ಮಹತ್ವಪೂರ್ಣದ್ದಾಗಿದೆ.

ಶಾಂತರೇಣುಕಾರಾಧ್ಯ
ಪ್ರಧಾನ ಕಾರ್ಯದರ್ಶಿ
ಎಸ್.ಎಫ್.ಐ. ಕರ್ನಾಟಕ ರಾಜ್ಯ ಸಮಿತಿ

ಸೆ. 29ರಂದು ದ. ಕ. ಜಿಲ್ಲಾ ಬೀಡಿ ಕಾರ್ಮಿಕರ ಪ್ರದರ್ಶನ

ಅದು ಮಾಡುತ್ತೇವೆ, ಇದು ಮಾಡುತ್ತೇವೆ, ಬೆಲೆಗಳನ್ನು ಇಳಿಸುತ್ತೇವೆ, ಬಡಜನರಿಗೆ ಸೌಲಭ್ಯಗಳನ್ನು ಒದಗಿಸುತ್ತೇವೆ ಎಂದು ಕಳೆದ 33 ವರ್ಷಗಳಿಂದಲೂ ಹೇಳಿಕೊಂಡು ಬರುತ್ತಿರುವ ಸರ್ಕಾರವು ಜನರ ತಾಳ್ಮೆಗೂ ಒಂದು ಮಿತಿ ಇದೆ ಎಂಬ ಮಾತನ್ನು ಸ್ಪಷ್ಟವಾಗಿ ಅರಿಯಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಸಿ. ಐ. ಟಿ. ಯು ಆಶ್ರಯದಲ್ಲಿ ಸೇರಿದ್ದ ಬೀಡಿಕಾರ್ಮಿಕರ ಬಹಿರಂಗ ಸಭೆಯಲ್ಲಿ ವ್ಯಕ್ತವಾದ ಒಟ್ಟು ಅಂಶ ಇದು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಎಲ್ಲರೂ 'ಸರ್ಕಾರ ಹೇಳುವುದು ಒಂದು ಆದರೆ ಮಾಡುವುದು ಮತ್ತೊಂದು' ಎಂದು ಹೇಳಿ, ಇಂತಹ ಹೊಣೆಗೇಡಿ ಹಾಗೂ ಸುಳ್ಳು ಹೇಳುವ ಸರ್ಕಾರದ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ರೈತಕಾರ್ಮಿಕರು ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಇಂದಿನ ಬೆಲೆಏರಿಕೆಗೆ ಅನುಗುಣವಾಗಿ ಕೂಲಿಯಲ್ಲಿ ಹೆಚ್ಚಳವಾಗುತ್ತಿಲ್ಲ ಎಂದು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ ಭಾಷಣಕಾರರು, ಕಾಂಟ್ರಾಕ್ಟ್ ಪದ್ಧತಿ, ಎಲೆ ಎವರೇಜು ಮುಂತಾದುವುಗಳಿಂದ ಬೀಡಿಕಾರ್ಮಿಕರು ಶೋಷಣೆಯಾಗುತ್ತಿರುವ ವಿಷಯವನ್ನು ಸಭೆಯಲ್ಲಿ ವಿವರವಾಗಿ ಹೇಳಲಾಯಿತು.

ಸಭೆಯನ್ನು ಉದ್ದೇಶಿಸಿ ಕಾಂ. ಜಗನ್ನಾಥ, ಎಚ್. ಗೋಪಾಲ್, ಯು ಬಿ. ಲೋಕಯ್ಯ, ಮಂಜಯ್ಯ ಅವರು ಮಾತನಾಡಿ ಬೀಡಿಕಾರ್ಮಿಕರ ಬೇಡಿಕೆಗಳ ಈಡೇರಿಕೆಯನ್ನು ಒತ್ತಾಯಿಸಿ ದ. ಕ. ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಸೆ. 29ರಂದು ನಡೆಸಲಾಗುವ ಮತಪ್ರದರ್ಶನದಲ್ಲಿ ಸಾವಿರಾರು ಸಂಖ್ಯೆಯ ಕಾರ್ಮಿಕರು ಭಾಗವಹಿಸಬೇಕೆಂದು ಮನವಿ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಬಾಬಣ್ಣ ವಹಿಸಿದ್ದರು. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT